ಸದನದಲ್ಲಿ ಎತ್ತುವುದಿಲ್ಲ. ಯಾವುದು ಆಗುತ್ತದೆ ಮತ್ತು ಆ ಭಾಗದ ರೈತರಿಗೆ ನೀರನ್ನು ಕೊಡತಕ್ಕಂತಹ ಸಾಧ್ಯತೆ ಇದ್ದಾಗ ಮಾತ್ರ ಈ ಪ್ರಶ್ನೆಯನ್ನು ಕೇಳಿದ್ದಾರೆ. ಈ ಭಾಗಕ್ಕೆ ಹಿಂದೆ ಸಹ ನೀರನ್ನು ಕೊಡುತ್ತಾ ಬಂದಿದ್ದಾರೆ, ಇವತ್ತು ಅದೇ ರೀತಿಯಾಗಿ ಆ ಭಾಗದ ರೈತರಿಗೆ ನೀರನ್ನು ಕೊಡಿ ಎಂದು ಆ ಪ್ರಶ್ನೆಯನ್ನು ಕೇಳಿದ್ದಾರೆ. ಈ ಭಾಗಕ್ಕೆ ಹಿಂದೆ ಸಹ ನೀರನ್ನು ಕೊಡುತ್ತಾ ಬಂದಿದ್ದಾರೆ, ಇವತ್ತು ಅದೇ ರೀತಿಯಾಗಿ ಆ ಭಾಗದ ರೈತರಿಗ ನೀರನ್ನು ಕೊಡಿ ಎಂದು ಆ ಪ್ರಶ್ನೆಯನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದುದರಿಂದ ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಿಸಿ ಅಥವಾ ಸಂಬಂಧಪಟ್ಟಂತಹ ಸ್ಟೇಟ್ ವಿಷಯವನ್ನು ಮುಖ್ಯಮಂತ್ರಿಗಳಿಗೆ ಕೊಟ್ಟರೆ ಹೇಗೆ? ಮುಖ್ಯಮಂತ್ರಿಗಳ ಕೆಳಗಡೆ ಒಂದೊಂದು ವಿಷಯಕ್ಕೆ ಸಂಬಂಧಿಸಿದಂತೆ ಒಬ್ಬೊಬ್ಬ ಮಂತ್ರಿಗಳು ಇದ್ದಾರಲ್ಲಾ?

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ, ಈಗ ಮಾನ್ಯ ಸದಸ್ಯರು ಉಪಾಧ್ಯಕ್ಷರ ಅಪ್ಪಣೆಯನ್ನು ಪಡೆದು ದಿಢೀರ್ ಎಂದು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಒಂದು ನೋಟೀಸನ್ನು ಕೊಟ್ಟಿದ್ದರೆ ಇದರ ಬಗ್ಗೆ ಏನಾದರೂ ಹೇಳಿಕೆಯನ್ನು ಕೊಡಬಹುದಾಗಿತ್ತು. ಅವರಿಗೆ ಮಾಹಿತಿಯು ನಿನ್ನೆ ರಾತ್ರಿ ಸಿಕ್ಕಿರಬಹುದು. ಅವರು ಈಗ ಈ ವಿಷಯವನ್ನು ಈಗ ಪ್ರಸ್ತಾಪ ಮಾಡಿದ್ದಾರೆ; ಇದನ್ನು ಸರ್ಕಾರ ಗಮನಿಸಿ, ಇದರ ಬಗ್ಗೆ ಒಂದು ಹೇಳಿಕೆ ಕೊಡಿಸಲಿಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ವಸಂತಕುಮಾರ್ ಶೆಟ್ಟಿಯವರ ಕೊಲೆ ಪ್ರಕರಣವನ್ನು ಸಿ.ಬಿ.ಎ.ಗೆ ಒಪ್ಪಿಸಲು ಒತ್ತಾಯ

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಮೊನ್ನೆಯ ದಿವಸ ತಮ್ಮ ಗಮನಕ್ಕೆ ಇದೇ ಸದನದಲ್ಲಿ ಶ್ರೀಮಾನ್ ಪ್ರತಾಪ ಚಂದ್ರಶೆಟ್ಟರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಆಗ ಮಾನ್ಯ ಗೃಹ ಸಚಿವರು ಏನು ಹೇಳಿದರು ಎಂದರೆ, ತಮ್ಮ ಕೊಠಡಿಯಲ್ಲಿಯೇ ವಸಂತಕುಮಾರ್ ಶೆಟ್ಟಿಯವರು ಕೊಲೆ ಪ್ರಕರಣದ ಬಗ್ಗೆ ಸಿ.ಐ.ಬಿ. ತನಿಖೆಗೆ ಒಪ್ಪಿಸಬೇಕೇ ಅಥವಾ ಯಾವ ರೀತಿಯಾಗಿ ಈ ತನಿಖೆಯನ್ನು ಮಾಡಬೇಕು ಎನ್ನುವುದರ ಬಗ್ಗೆ ತಾವು ನನ್ನ ಕೊಠಡಿಯಲ್ಲಿ ಮುಖ್ಯಮಂತ್ರಿಗಳನ್ನು ಕರೆಯಿಸುತ್ತೇನೆ, ಕಾನೂನು ಮತ್ತು ಸಂಸದೀಯ ಮಂತ್ರಿಗಳನ್ನು ಸಹ ಕರೆಸುತ್ತೇನೆ, ಅಮೇಲೆ ನಮ್ಮ ಗೃಹ ಸಚಿವರನ್ನು ಕರೆಸುತ್ತೇನೆ, ಸಂಬಂಧಪಟ್ಟಂತಹ ಅಡ್ವೋಕೇಟ್ ಜನರಲ್‌ನ್ನು ಮತ್ತು ಸಂಬಂಧಪಟ್ಟಂಥವರೆಲ್ಲರನ್ನೂ ಕರೆಯಿಸಿ ಮತ್ತು ನಮ್ಮ ಐ.ಜಿ. ಮತ್ತು ಸಿ.ಐ.ಡಿ.ಯವರು ಎಂದು ಕಾಣುತ್ತದೆ. ಮತ್ತು ಡಿ.ಜಿ.ಪಿ. ಎಲ್ಲರನ್ನು ಕರೆಯಿಸಿ ಒಂದು ಮೀಟಿಂಗ್‌ನ್ನು ಮಾಡಿ ನಾನು ಇದಕ್ಕೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ ಎನ್ನುವಂತಹ ಒಂದು ಮಾತನ್ನು ಅವರು ಹೇಳಿದ್ದರು. ಅದರ ಪ್ರಕಾರ ಅಧ್ಯಕ್ಷರು ಮೀಟಿಂಗ್‌ನ್ನು ಕರೆಯಿಸಿದ್ದರು. ಅದಕ್ಕಾಗಿ ನಾನು ಅಭಿನಂದಿಸುತ್ತೇನೆ. ಆದರೆ ಆ ಸಂದರ್ಭದಲ್ಲಿ ಇದಕ್ಕೆ ಸಂಬಂಧಿಸಿದಂತೆ ಕೆಲವು ಚರ್ಚೆಗಳು ನಡೆಯಿತು. ಆದರೆ ಕೊನೆಯ ವೇಳೆಯಲ್ಲಿ ಸಡನ್ ಆಗಿ ಒಂದು ನಿರ್ಣಯಕ್ಕೆ ಇನ್ನು ಬರಬೇಕಾಗಿತ್ತು. ಆದರೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು

ಎಂದರೆ ಇದೆಲ್ಲಾ ಆಗುವುದಿಲ್ಲ ನೋಡೋಣ, ಹಿಂದಿನ ಸರ್ಕಾರ ಯಾವುದು ಈ ರೀತಿಯಾಗಿ ಮಾಡಿಲ್ಲವೆಂದು ಎನ್ನತಕ್ಕಂತಹ ಧಾಟಿಯಲ್ಲಿ ಅವರು ಹೇಳಿಬಿಟ್ಟರು. ಈಗ ನಮ್ಮ ಮುಂದೆ ಇರತಕ್ಕಂತಹ ಪ್ರಶ್ನೆ ಏನು ಎಂದರೆ, ಲಿಲ್ಲಿನ ಈ ಕೊಲೆ ಪ್ರಕರಣವು ಸರಿಯಾಗಿ ತನಿಖೆಯಾಗಬೇಕಾದರೆ ಆ ಕೊಲೆ ಪ್ರಕರಣದಲ್ಲಿ ಯಾರ್ಯಾರು ಸೇರಿದ್ದಾರೆ ಎನ್ನುವಂಥದ್ದನ್ನು ನಾವು ಕಂಡುಹಿಡಿಯಬೇಕಾದರೆ, ಸಿ.ಬಿ.ಐ.ಗೆ ಈ ಪ್ರಕರಣವನ್ನು ಒಪ್ಪಿಸಿ ಎನ್ನತಕ್ಕಂತಹ ವಾದವನ್ನು ಲಿಲ್ಲಿರತಕ್ಕಂತಹ ಜನ ಮತ್ತು ಶಾಸಕರುಗಳು ಸಾಕಷ್ಟು ದಿವಸಗಳಿಂದ ಸತ್ಯಾಗ್ರಹವನ್ನು ಮಾಡಿಕೊಂಡು ಬಂದಿದ್ದಾರೆ. ಅದು ಯಾರ ಮೇಲೂ ಆಗಲಿ, ಸರ್ಕಾರದ ವಿರುದ್ಧ ಎಂದು ಅಲ್ಲ; ಲಿಲ್ಲಿರತಕ್ಕಂತಹವರು ಸುಮಾರು ಒಂದು ವರ್ಷದಿಂದಲೂ ಸಹ ಸತ್ಯಾಗ್ರಹವನ್ನು ಶಾಂತಿ ಪೂರ್ಣವಾಗಿ, ಶಾಂತಿಯುತವಾಗಿ, ಆ ನಡೆಸುತ್ತಿದ್ದಾರೆ. ಮತ್ತು ಸರ್ಕಾರಕ್ಕೆ ಯಾವುದೇ ರೀತಿಯಲ್ಲಿ ತೊಂದರೆಯನ್ನು ಕೊಡದೇ ಇರತಕ್ಕಂತಹ ರೀತಿಯಲ್ಲಿ ಅವರು ಯಾರನ್ನೂ ಅಡಚಣೆ ಮಾಡತಕ್ಕಂತಹ ರೀತಿಯಲ್ಲಿ ಅವರು ಇಲ್ಲಿಯವರೆಗೆ ಸಮಾಧಾನದಿಂದ ಸತ್ಯಾಗ್ರಹವನ್ನು ಮಾಡಿಕೊಂಡು ಬಂದರು. ಅವರದ್ದು ಒಂದೇ ಒಂದು ಬೇಡಿಕೆ ಏನು ಎಂದರೆ ಸಿ.ಬಿ.ಐ. ತನಿಖೆಗೆ ಆ ಪ್ರಕರಣವನ್ನು ವಹಿಸಿಕೊಡಿ ಎಂದು. ಇದನ್ನು ಸಿ.ಬಿ.ಐ. ತನಿಖೆಗೆ ವಹಿಸಿಕೊಡುವುದಕ್ಕೆ ಸರ್ಕಾರದವರು ಏಕೆ ಹಿಂದು ಮುಂದು ನೋಡುತ್ತಿದ್ದಾರೋ ಗೊತ್ತಿಲ್ಲ. ನಾವೇನಾದರೂ ಸರ್ಕಾರದ ಮೇಲೆ ನೇರವಾಗಿ ಆಪಾದನೆಯನ್ನು ಮಾಡಿದ್ದರೆ, ಇಲ್ಲ ಅಧಿಕಾರಗಳ ಮೇಲೆ ಆಪಾದನೆಯನ್ನು ಮಾಡಿದ್ದರೆ ನೀವು ಏನು ಹೇಳಬಹುದಾಗಿತ್ತು ಎಂದರೆ, ಇದೊಂದು ಪ್ರತಿಷ್ಠೆಯ ಪ್ರಶ್ನೆ ಇದೆ; ನೀವು ಅಧಿಕಾರಿಗಳಲ್ಲಿ ಭೇದ ಭಾವ ಇಲ್ಲ ಎಂದು ಹೇಳಿ ಮಾಡಿಸುತ್ತಿದ್ದೀರಿ. ಅದಕ್ಕೆ ನಾವು ಇದಕ್ಕೆ ಸಿ.ಬಿ.ಐ. ತನಿಖೆಗೆ ಕೊಡುವುದಿಲ್ಲ ಎಂದು ಹೇಳಿದರೆ ಮಾತು ಬೇರೆ. ಆದರೆ ಆ ಪ್ರಕರಣ ಇರತಕ್ಕಂತಹ ಸ್ಥಳದಲ್ಲಿ ಯಾರೂ ಕೂಡ ಕೊಲೆಗಾರರು ಯಾರು ಎಂದು ಹೇಳಲಿಕ್ಕೆ ಮುಂದೆ ಬರುತ್ತಲ್ಲ. ಏಕೆಂದರೆ ಈ ಸ್ಥಳೀಯ ಪೋಲೀಸರು ಬಹಿರಂಗಪಡಿಸಬಹುದು ಅಥವಾ ಸ್ಥಳದಲ್ಲಿರತಕ್ಕಂತಹ ಜನರಲ್ಲಿ ಒಬ್ಬರಿಂದ ಒಬ್ಬರಿಗೆ ಜಗಳವಾಗಬಹುದು ಮತ್ತೆ ಪಾರ್ಟಿ ಪಂಗಡ ಇದರ ಮೇಲೆ ತಿರುಗಿ ಹೋದರೆ ನಾಳೆ ಏನು ಆಗುತ್ತದೆ ಎಂದರೆ ರಾಜಕೀಯ ಉದ್ದೇಶ ಇದರಲ್ಲಿ ಇದೆ ಎಂದು ಹೇಳಿ ಒಂದು ಅಪವಾದ ಬರಬಹುದು ಎನ್ನತಕ್ಕಂಥಹ ದೃಷ್ಟಿಯಿಂದ ಇವನ್ನೆಲ್ಲವನ್ನು ತಡೆಯುವ ದೃಷ್ಟಿಯಿಂದ ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಯಾವುದೇ ರಾಜಕೀಯ ದುರುದ್ದೇಶ ಇಲ್ಲ, ಇದರಲ್ಲಿ ನಿಷ್ಪಕ್ಷಪಾತವಾದಂತಹ ಒಂದು ಎನಕ್ವೈರಿ ಆಗಬೇಕು ಮತ್ತು ಈ ಪ್ರಕರಣದ ಹಿಂದೆ ಕೊಲೆಗಾರರು ಇದ್ದಾರೆ ಅವರಿಗೆ ಶಿಕ್ಷೆಯಾಗಬೇಕು ಮತ್ತು ನಿರಾಪರಾಧಿಗಳಿಗೆ ಶಿಕ್ಷೆಯಾಗಬಾರದು ಎನ್ನುವ ದೃಷ್ಟಿಯಿಂದಲೇ ಈ ಒಂದು ತನಿಖೆಯನ್ನು ನಡೆಸಬೇಕೆಂದು ಹೇಳಿ ಮಾನ್ಯ ಸದಸ್ಯರು ಸಿ.ಬಿ.ಐ. ತನಿಖೆಯನ್ನು ನಡೆಸಬೇಕೆಂದು ಕೇಳಿದ್ದಾರೆ. ಬಹುಶಃ ಸರ್ಕಾರದವರು ಇದರ ಬಗ್ಗೆ ಶಿಫಾರಸ್ಸು ಮಾಡಬಹುದು. ಇದು ದೊಡ್ಡದು ಏನೂ ಅಲ್ಲ. ಏಕೆಂದರೆ ಯಾರು ಒಂದು ವರ್ಷದಿಂದ ಸತತವಾಗಿ ಸತ್ಯಾಗ್ರಹವನ್ನು ಮಾಡಿಕೊಂಡು ಪ್ರಾಮಾಣಿಕವಾಗಿ ಕೇಳುತ್ತಿದ್ದಾರೆ. ಅದರ ಕಡೆ ನಿಮ್ಮ ಸರ್ಕಾರದ ಗಮನವಿಲ್ಲ. ಕೊನೆಗೆ ಏನು ಮಾಡಬೇಕು ಎಂದರೆ ಯಾವುದಾದರೂ

ಗಲಾಟೆಯನ್ನು ಮಾಡಿದರೆ ಕೇಳುತ್ತೀರಿ ಎನ್ನತಕ್ಕಂತಹ ಪ್ರಶ್ನೆ ಬರಬಹುದು. ಇಲ್ಲ ಎಂದರೆ ರಸ್ತೆ ತಡೆಯನ್ನು ಮಾಡಬೇಕು. ಇಲ್ಲಕಲ್ಲು ಹೊಡೆಯಬೇಕು ಅಲ್ಲ ಸರ್ಕಾರಿ ಆಸ್ತಿಯನ್ನು ಹಾಳುಮಾಡಬೇಕು ಇಲ್ಲ ಬಸ್‌ಗಳನ್ನು ಸುಡುಕಬೇಕು ಆಗ ನಿಮ್ಮಗಮನ ಈ ಕಡೆ ಸೆಳೆಯುತ್ತದೆಯೇ? ಹೋಗತಕ್ಕಂತಹ ಜನ ಅವರಿಗೆ ನೀವು ಒಂದು ನ್ಯಾಯವನ್ನು ದೊರಕಿಸಿಕೊಡುವಂಥದ್ದನ್ನು ಮಾಡುತ್ತಿಲ್ಲ ಎಂದರೆ, ಖಂಡಿತವಾಗಿ ನೀವಾಗಿಯೇ ಈ ಸಮಸ್ಯೆಯನ್ನು ಅನಾವಶ್ಯಕವಾಗಿ ಜಟಿಲಮಾಡುತ್ತಿದ್ದೀರಿ ಎನ್ನತಕ್ಕಂತಹ ಮಾತನ್ನು ನಾನು ಹೇಳಬೇಕಾಗುತ್ತದೆ. ಮತ್ತೆ ನನಗೆ ಇನ್ನೊಂದು ವಿಷಯ ಗೊತ್ತಾಗಿದೆ ಮಾನ್ಯ ಸಿಂಧ್ಯಾಜೀಯವರು ಈ ವಿಷಯವನ್ನು ಒಪ್ಪಿಕೊಂಡು ಇದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲು ಒಪ್ಪಿದ್ದಾರೆ ಎಂದು ಈ ಸದನದಲ್ಲಿ ಕೂಡ ನಮಗೆ ಇದರಿಂದ ಯಾರದೂ ತೊಂದರೆ ಇಲ್ಲ, ನಾನು ಬೇಕಾದರೆ ನಿಮ್ಮ ಮನಸ್ಸಿಗೆ ಸಿ.ಬಿ.ಐ. ತನಿಖೆ ಬೇಕು ಎಂದು ಅನ್ನಿಸಿದರೆ, ಸಿ.ಬಿ.ಐ. ತನಿಖೆಗೆ ಕಳುಹಿಸುತ್ತೇವೆ ಎನ್ನತಕ್ಕಂತಹ ಮಾತನ್ನು ಸಹ ಅವರು ಈ ಸದನದಲ್ಲಿ ಹೇಳಿದ್ದಾರೆ. ಒಂದು ಸಲ ಅಲ್ಲ ಎರಡು ಸಲ ಈ ಮಾತನ್ನು ಹೇಳಿದ್ದಾರೆ. ಇದರಲ್ಲಿ ನಮ್ಮದು ಪಟ್ಟಭದ್ರ ಹಿತಾಸಕ್ತಿಗಳು ಏನೇನೂ ಇಲ್ಲ ಎಂದು ಹೇಳಿದ್ದಾರೆ. ಪಟ್ಟಭದ್ರ ಹಿತಾಸಕ್ತಿ ಏನೇನೂ ಇಲ್ಲ ಎಂದು ಹೇಳಿದಾಗ ಮತ್ತು ನಮ್ಮ ಕಡೆಯಿಂದ ಯಾವುದೇ ಅಪಾದನೆ ಪೋಲೀಸರ ಬಗ್ಗೆ ಆಗಲಿ ಅಥವಾ ನಿಮ್ಮ ಬಗ್ಗೆ ಆಗಲಿ ಏನೂ ಇಲ್ಲ ಎಂದು ಹೇಳಿದಾಗ ಈ ಪ್ರಕರಣವನ್ನು ಒಂದು ನಿಷ್ಪಕ್ಷಪಾತವಾದಂತಹ ಒಂದು ಏಜನ್ಸಿರಿಗೆ ನೀವು ಏಕೆ ಒಪ್ಪಬಾರದು? ಆದುದರಿಂದ ದಯವಿಟ್ಟು ತಾವು ಇದನ್ನು ಸಿ.ಬಿ.ಐ.ಗೆ ಏಜನ್ಸಿರಿಗೆ ಕಳುಹಿಸಬೇಕು. ಈ ಪ್ರಕರಣವನ್ನು ಸಿ.ಬಿ.ಐ.ನವರು ಏಜನ್ಸಿರಿ ಮಾಡಿದರೆ ಕೊಲೆಗಾರರನ್ನು ಪತ್ತೆ ಹಚ್ಚುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಸಣ್ಣಪುಟ್ಟ ಜನರುಗಳು ಇದರಲ್ಲಿ ಇದ್ದಾರೆ. ಅವರುಗಳು ಭಾಗಿಗಳಾಗುತ್ತಾರೆ. ಈ ವ್ಯಕ್ತಿ ಕೊಲೆಗಾರರು ಎಂದು ಯಾರು ಇರುತ್ತಾರೆ ಅವರು ಮಾತ್ರ ಕೈಬಿಟ್ಟು ಹೋಗುತ್ತಾರೆ. ನಾಳೆ ಇದು ಒಂದಕ್ಕೆ ಅಲ್ಲ ಅಂತಹ ಜನರು ಹೊರಗಡೆ ಹೋದರೆ ಇಡೀ ನಮ್ಮಕರ್ನಾಟಕ ರಾಜ್ಯದಲ್ಲಿಯೇ ಇಂತಹ ಒಂದು ತೊಂದರೆ ಎಲ್ಲಾ ಕಡೆಯಲ್ಲಿ ಪ್ರಾರಂಭವಾಗುತ್ತದೆ. ಅದಕ್ಕಾಗಿ ಈಗಾಗಲೇ ಮಂಗಳೂರು ಜಿಲ್ಲೆಯಲ್ಲಿ ಬಾಂಬೆಯಿಂದ ಬರತಕ್ಕಂತಹ ಗೂಂಡಾಗಳಿಂದ ಮತ್ತು ಅಲ್ಲಿಂದ ಬರತಕ್ಕಂತಹ ಅಂಡರ್ ಗ್ರೌಂಡ್ ವರ್ಕ್‌ನಲ್ಲಿರತಕ್ಕಂತಹ ಜನರಿಂದ ಇವತ್ತು ಸಾಕಷ್ಟು ದರೋಡೆ, ಕೊಲೆಗಳು, ಲೂಟಿಗಳು ಮತ್ತು ಶಾಂತಿಗೆ ಭಂಗವನ್ನು ಉಂಟುಮಾಡತಕ್ಕಂತಹ ಪರಿಸ್ಥಿತಿ ನಿಧಾನವಾಗಿ ನಡೆಯುತ್ತಿದೆ. ನ್ಯಾಷನಲ್ ಹೈವೇಗಳಲ್ಲಿ ದರೋಡೆಗಳು ನಡೆಯುತ್ತಿವೆ. ಇಂತಹ ಪರಿಸ್ಥಿತಿ ಇದ್ದಾಗ ತಾವು ದಯವಿಟ್ಟು ಇದನ್ನು ಪತ್ತೆ ಹಚ್ಚಿದರೆ ಬೇರೆ ಕಡೆ ಆಗತಕ್ಕಂತಹ ತೊಂದರೆಗಳು ಕೂಡ ತಾವು ನಿಲ್ಲಿಸಿದ ಹಾಗೆ ಆಗುತ್ತದೆ. ಆದುದರಿಂದ ದಯವಿಟ್ಟು ಇದನ್ನು ತಾವು ಸಿ.ಬಿ.ಐ. ತನಿಖೆಗೆ ಒಪ್ಪಿಸಬೇಕು ಎಂದು ಹೇಳಿ ತಮ್ಮಮೂಲಕ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅವರುಗಳು ಅಲ್ಲಿ ಒಂದು ಸಲ ಅಲ್ಲ ಎರಡು ಸಲ ಅಲ್ಲ ಧರಣಿಯನ್ನು ಕುಳಿತಿದ್ದಾಗ ಇದನ್ನು ನಾನು ಈ ಪ್ರಕರಣವನ್ನು ತನಿಖೆ ಮಾಡಿಸುತ್ತೇನೆ ಎಂದು ಹೇಳಿದೀರಿ. ಆದಕ್ಕಾಗಿ ತಾವು ದಯವಿಟ್ಟು ಇದರ ಬಗ್ಗೆ ಇವತ್ತಿನ ದಿವಸ ಆರ್ಡರ್ ಮಾಡಬೇಕೆಂದು ಹೇಳಿ ಪುನಃ ಅವರಲ್ಲಿ ತಮ್ಮ ಮೂಲಕ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

+ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಉಪಾಧ್ಯಕ್ಷರೆ, ಇದು ನನ್ನ ಕ್ಷೇತ್ರದಲ್ಲಿ ಆಗಿರತಕ್ಕಂತಹ ಪೂರ್ವ ನಿಯೋಜಿತ ಕೊಲೆ. ತನ್ನ ಕೊಲೆಯೂ ಆಗುತ್ತದೆಂದು ದೂರನ್ನು ಕೊಟ್ಟ ನಂತರ ಕೊಲೆಯಾಗಿದೆ. ಕೊಲೆಯಾದಾಗ ಅವನ ಜೇಬಿನಲ್ಲಿ ಕೊಲೆಯಾಗುತ್ತದೆಂದು ದೂರ ಕೊಟ್ಟಂತಹ ನಕಲು ಮತ್ತು ಅದನ್ನು ಸ್ವೀಕರಿಸಿದ ಪತ್ರ ಎಲ್ಲಾ ಇದ್ದು ಕೊಲೆಯಾಗಿದೆ. ಈ ಸಂದರ್ಭದಲ್ಲಿ ಬಹುಶಃ ಅವನಿಗೆ ನಂಬಿಕೆ ಇತ್ತೇನೋ. ನಾನು ಸತ್ತರೂ ಸಹ ಈ ಒಂದು ಆಧಾರದಲ್ಲಿ ಈ ಕೊಲೆಯನ್ನು ಮಾಡಿದವನನ್ನು ಈ ಸರ್ಕಾರದವರು ಪತ್ತೆ ಹಚ್ಚುತ್ತಾರೆ ಎನ್ನುವ ವಿಶ್ವಾಸ ಅವನಲ್ಲಿ ಇದ್ದಿರಬೇಕು. ಬಹುಶಃ ಕೊಲೆಯಾಗಿ ಒಂದು ತಿಂಗಳುಗಳ ಕಾಲ ಯಾರನ್ನು ಬಂಧಿಸಲಿಕ್ಕೆ ಆಗಲಿಲ್ಲ. ಆದುದರಿಂದ ಮಾನ್ಯ ಉಪಾಧ್ಯಕ್ಷರೆ, ಈ ವಿಷಯವನ್ನು ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಮತ್ತು 8.4.1995ರಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನೂ ಸಹ ಬರೆದಿದ್ದೇನೆ. ಆ ಪತ್ರದಲ್ಲಿ ಏನು ಬರೆದಿದ್ದೇನೆ ಎಂದರೆ, ಬೊಂಬಾಯಿ ಮತ್ತು ಕೇರಳದ ಭೂಗತ ಕೊಲೆಗಡುಕರಿಂದ ಈ ಕೊಲೆಯಾಗಿರುವ ಸಾಧ್ಯತೆಗಳು ಇವೆ. ಆದುದರಿಂದ ಉನ್ನತಮಟ್ಟದ ಅಧಿಕಾರಿಗಳಿಂದ ಈ ಒಂದು ಪ್ರಕರಣವನ್ನು ತನಿಖೆ ಮಾಡಿ ಎಂದು ಮನವಿಯನ್ನು ಮಾಡಿದ್ದೆ. ನಾನೇನೂ ಸಿ.ಬಿ.ಐ.ಗೆ ಕೊಡಿ ಎಂದು ಕೇಳಲಿಲ್ಲ. ಆದರೆ ಈ ಪ್ರಕರಣವನ್ನು ಸಮಗ್ರವಾಗಿ ಕಂಡು ಹಿಡಿಯಬೇಕಾದರೆ ಉನ್ನತ ಮಟ್ಟದ ಸಿ.ಬಿ.ಐ. ಆಗಬಹುದು ಅಥವಾ ಬೇರೆ ಯಾವುದಾದರೂ ವ್ಯವಸ್ಥೆಯನ್ನು ಮಾಡಿ ಈ ಕೊಲೆಗಾರರನ್ನು ಬಂಧಿಸಬೇಕು ಎನ್ನತಕ್ಕಂತಹ ಇಚ್ಛೆಯನ್ನು ವ್ಯಕ್ತಪಡಿಸಿದ್ದೆ, ಆ ಪತ್ರವನ್ನು ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದೇನೆ. ಸುಮಾರು ಹತ್ತೂವರೆ ತಿಂಗಳುಗಳಿಂದ ಅಲ್ಲಿ ಸತ್ಯಾಗ್ರಹ ನಡೆಯುತ್ತಿದೆ. ಅಲ್ಲಿ ಸತ್ಯಾಗ್ರಹ ನಡೆಯುತ್ತಿದ್ದರೂ ಸಹ ಯಾವುದೇ ಖಾತೆಯ ಸಚಿವರು, ಯಾವುದೇ ಅಧಿಕಾರಿಗಳು ಸತ್ಯಾಗ್ರಹವನ್ನು ಮಾಡುತ್ತಿರುವವರನ್ನು ಮಾತನಾಡಿಸತಕ್ಕಂತಹ ಒಂದು ಸೌಜನ್ಯವನ್ನು ಹೊಂದಿಲ್ಲದೇ ಇರತಕ್ಕಂತಹ ಒಂದು ವ್ಯವಸ್ಥೆಯಲ್ಲಿ ನಾವು ಇದ್ದೇವೆ. ಸಾಮಾನ್ಯವಾಗಿ ಕಾನೂನು ನಡತೆಯಲ್ಲಿ ಸತ್ಯಾಗ್ರಹವನ್ನು ಕುಳಿತುಕೊಳ್ಳುವವರು ನಮ್ಮ ರಾಜ್ಯದಲ್ಲಿ ಯಾವುದೇ ರಾಜಕೀಯದವರು ಆಗಲಿ ಹತ್ತೂವರೆ, ಹನ್ನೊಂದು ತಿಂಗಳುಗಳ ಕಾಲ ಸತ್ಯಾಗ್ರಹವನ್ನು ಮಾಡುತ್ತಾ ಕುಳಿತಿರುವಂಥದ್ದನ್ನು ದಾಖಲೆಗಳಲ್ಲಿ ತೋರಿಸಿ. ಬಹುಶಃ ನಾವು ಯಾವ ಹಂತಕ್ಕೆ ಹೋಗುತ್ತಿದ್ದೇವೆ ಎಂದರೆ, ಬಹುಶಃ ಈ ಕೊಲೆಗಳಿಂದ ಕೊಲೆಗಳು ಆಗಬಾರದು. ಮತ್ತು ಈ ಕೊಲೆಗಳಿಂದ ಮತ್ತೊಂದು ಕೊಲೆಗೆ ಪ್ರೇರಣೆಯಾಗಬಾರದು ಎನ್ನತಕ್ಕಂತಹ ಉದ್ದೇಶದಿಂದ, ಇದರ ಹಿಂದೆ ಇರತಕ್ಕಂತಹ ಭಾವನೆಗಳನ್ನು ತಾವು ಅರ್ಥಮಾಡಿಕೊಂಡಿಲ್ಲ. ಬಹುಶಃ ನಾವುಗಳು ಆ ದಾರಿಗೆ ಹೋಗಬಾರದು ಎನ್ನತಕ್ಕಂತಹ ಇಚ್ಛೆಯಿಂದ ಶಾಂತಿಯುತವಾಗಿ ಸತ್ಯಾಗ್ರಹವನ್ನು ಮಾಡಿಕೊಂಡು ಬರುತ್ತಿದ್ದೇವೆ. ಈ ಮಧ್ಯೆ ನಮ್ಮ ಧರಣಿಯ ಚಪ್ಪರಕ್ಕೆ ಬೆಂಕಿಯನ್ನು ಹಾಕಿದರು. ಕಲ್ಲುಗಳನ್ನು ಹೊಡೆದರು. ಬಹಳಷ್ಟು ಭಾಷಣಗಳು ಈ ವಿಚಾರದಲ್ಲಿ ನಡೆದವು. ಆದರೂ ಸಹ ಇಲ್ಲಿಯವರೆಗೆ ಸತ್ಯಾಗ್ರಹದಿಂದ ಏಳಿಸಲಿಕ್ಕೆ ಸಾಧ್ಯವಾಗಲಿಲ್ಲ. ಅದರ ಅರ್ಥ ನಾವು ಸತ್ಯಾಗ್ರಹವನ್ನು ಕುಳಿತು ನಾವು ಏನೋ ಸಾಧನ ಮಾಡುತ್ತೇವೆ ಎನ್ನತಕ್ಕಂತಹ ಭಾವನೆಯನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಇವತ್ತು

ನಾವು ಇರತಕ್ಕಂತಹ ವ್ಯವಸ್ಥಗಳ ಬಗ್ಗೆ, ನಮ್ಮ ಸಚಿವರುಗಳು ಮಾಡುತ್ತಿರತಕ್ಕಂಥದ್ದರ ಬಗ್ಗೆ ನನಗೆ ಅನುಮಾನವಾಗುತ್ತದೆ. ಹೋಗಲಿ ಇದರಲ್ಲಿ ಏನು ಪ್ರತಿಷ್ಠೆ ಇದೆ ಅಥವಾ ನಾವು ಇದರಲ್ಲಿ ಏನಾದರೂ ಸೋತರೆ ಅಥವಾ ನಮಗೆ ನ್ಯಾಯ ಸಿಗದಿದ್ದರೆ ಇದರ ಬಗ್ಗೆ ನಮ್ಮ ಕ್ಷೇತ್ರದ ಜನವಾದರೂ ಏನು ತಿಳಿದುಕೊಳ್ಳುತ್ತಾರೆ? ಬೇರೆ ಜನರು ಏನು ತಿಳಿದುಕೊಳ್ಳುತ್ತಾರೆ? ಸತ್ಯಾಗ್ರಹ ಮಾಡುತ್ತಿರುವವರು ಏನು ತಿಳಿದುಕೊಳ್ಳುತ್ತಾರೆ? ಈ ಸತ್ಯಾಗ್ರಹಗಳಿಂದ ಏನೂ ಪ್ರಯೋಜವಿಲ್ಲ. ಈ ಸತ್ಯಾಗ್ರಹಗಳಿಂದ ನಮಗೆ ಏನೂ ಸಿಕ್ಕುವುದಿಲ್ಲ. ಈ ಸತ್ಯಾಗ್ರಹಗಳಿಂದ ನ್ಯಾಯ ಸಿಗುವುದಿಲ್ಲ, ಈ ಸತ್ಯಾಗ್ರಹಗಳಿಂದ ಈ ಅಧಿಕಾರಿಗಳು ಬಗ್ಗುವುದಿಲ್ಲ. ಈ ಸತ್ಯಾಗ್ರಹಗಳಿಂದ ಈ ಸರ್ಕಾರದ ಕಣ್ಣು ತೆರೆಯುವುದಿಲ್ಲ. ಎನ್ನತಕ್ಕಂತಹ ನಿರ್ಧಾರಕ್ಕೆ ಬರಬೇಕಾಗುತ್ತದೆ ಎಂಬ ಪ್ರಶ್ನೆ ನಮ್ಮ ಮುಂದೆ ಇದೆ. ಮತ್ತೊಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುವುದನೆಂದರೆ, ಈಗ ಕೊಲೆಗಾರರ ಅಪಾದಿತರು ಯಾರು ಇದ್ದಾರೆ ಅವರ ಮನೆಯಲ್ಲಿ ಕೆಲಸದವರು ಯಾರು ಇದ್ದಾರೆ ಅವರು ಕೊಟ್ಟಂತಹ ಮಾಹಿತಿಯ ಪ್ರಕಾರವಾಗಿ ಕೊಲೆಗಾರರುಗಳು ಮೂರು ಜನರು ಬಂದಿದ್ದರು ಎನ್ನತಕ್ಕಂತಹ ವಿಚಾರವನ್ನು ವಿಚಾರಣೆಯ ಸಂದರ್ಭದಲ್ಲಿ ಹೇಳಿದ್ದರು. ಆದರೂ ಸಹ ಅವರನ್ನು ಬಂಧಿಸುವಂತಹ ಪ್ರಯತ್ನವನ್ನು ಮಾಡಿಲ್ಲ. ಅವರು ಎಲ್ಲಿ ಹೋಗಿದ್ದಾರೆ ಎಂಬುದನ್ನು ಹುಡುಕುವಂತಹ ಪ್ರಯತ್ನವನ್ನು ಮಾಡಿಲ್ಲ. ಬಹುಶಃ ಬ್ರಿಟಿಷರೇ ಈ ರಾಜ್ಯವನ್ನು ಆಳುತ್ತಿದ್ದರೆ ನ್ಯಾಯ ಸಿಗುತ್ತಿತ್ತು. ಈಗ ಅಂತಹ ವ್ಯವಸ್ಥೆ ಇದೆ. ಏಕೆ ನಾವುಗಳು ಈ ಸ್ಥಿತಿಗೆ ತಂದು ಇಟ್ಟಿದ್ದೇವೆ. ಎನ್ನತಕ್ಕಂತಹ ಪ್ರಶ್ನೆ ನಮ್ಮ ಮುಂದೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಂತಹ ಸಂದರ್ಭದಲ್ಲಿ ಮೊನ್ನೆ ಒಂದು ವಿಷಯವನ್ನು ಹೇಳಿದರು, ಕಾನೂನಿನ ತೊಂದರೆ ಇಲ್ಲ ಎಂದು ಹೇಳಿ ಖಂಡಿತವಾಗಿಯೂ ಈ ಪ್ರಕರಣವನ್ನು ಸಿ.ಬಿ.ಐ.ನವರಿಗೆ ಒಪ್ಪಿಸುತ್ತೇನೆ ಎನ್ನತಕ್ಕಂತಹ ವಿಶ್ವಾಸವನ್ನು ಇದೇ ಸದನದಲ್ಲಿ ಆ ದಿವಸ ನಮ್ಮ ನಾಯಕರಾಗಿರತಕ್ಕಂತಹ ಖರ್ಗೆಯವರು ಮತ್ತು ಲೋಕಸಭಾ ಸದಸ್ಯರಾದ ಆಸ್ಕರ್ ಫರ್ನಾಂಡೀಸ್ ನಾವುಗಳಿಲ್ಲರೂ ಹೋಗಿದ್ದವು. ತಾವು ಬರಲಿಕ್ಕೆ ಹೇಳಿದ್ದೀರಿ ಎಂದು. ಆಗ ಒಂದು ವ್ಯವಸ್ಥಿತವಾದಂತಹ ಉತ್ತರವನ್ನು ಕೊಟ್ಟಿಲ್ಲ. ನಾನು ಈಗಲೂ ಸಹ ಹೇಳುವುದು ಏನೆಂದರೆ ನಮಗೆ ಸಿ.ಬಿ.ಐ. ಮುಖ್ಯವಾಗಿಲ್ಲ. ನಮಗೆ ಸತ್ಯ ಮುಖ್ಯವಾಗಿದೆ, ಅಪರಾಧಿಗಳನ್ನು ಪತ್ತೆ ಮಾಡಬೇಕಾಗಿರುವುದು ಮುಖ್ಯವಾಗಿದೆ. ಪದೇ ಪದೇ ಸಿ.ಬಿ.ಐ. ತನಿಖೆಗಾಗಿ ಒತ್ತಾಯಿಸುತ್ತಿದ್ದೇವೆ. ಆದರೆ ಇವತ್ತು ನಾವು ವಿಶ್ವಾಸವನ್ನು ಕಳೆದುಕೊಂಡಿದ್ದೇವೆ. ನಾವು ಈ ಸದನದಲ್ಲಿ ಇದರ ಬಗ್ಗೆ ಹೇಳುತ್ತಿದ್ದೇವೆ. ಬಹುಶಃ ಈ ಸಂದರ್ಭದಲ್ಲಿ ನಾವು ಇಷ್ಟು ಶಾಂತಿಯುತವಾಗಿ ಸತ್ಯಾಗ್ರಹವನ್ನು ಮಾಡಿದ್ದರೂ ಸಹ ಉದ್ದೇಶ ಪೂರ್ವಕವಾಗಿ ಈ ರೀತಿಯಾಗಿ ಮಾಡಿದರೆ, ತಮಗೆ ಏನಾದರೂ ಮಾಡದಿದ್ದರೆ ತಮಗೆ ಕಿರೀಟ ಸಿಗುತ್ತದೆಯೇ? ನಾವು ಹತ್ತೂವರೆ ತಿಂಗಳುಗಳ ಕಾಲ ಸತ್ಯಾಗ್ರಹವನ್ನು ಮಾಡಿದ್ದರೂ ತಾವು ಕೊನೆಗೂ ಏನೂ ಮಾಡದಿದ್ದರೆ ನಿಮಗೆ ಕೀರ್ತಿ ಬರುತ್ತದೆಯೇ? ನಿಮಗೆ ಇದರಿಂದ ಪ್ರತಿಷ್ಠೆ ಆ ಯಶಸ್ಸು ಸಿಗುತ್ತದೆ ಎನ್ನುವುದಾದರೆ ನಾವು ಸೋಲುವುದಕ್ಕೂ ಬದ್ಧರಿದ್ದೇವೆ ಎನ್ನತಕ್ಕಂಥದ್ದು ತಮಗೆ ಮನವರಿಕೆಯನ್ನು ಮಾಡಿಕೊಡುತ್ತೇವೆ. ಆದರೆ ಇದು ತಲೆಯನ್ನು

ಮುಟ್ಟಿಕೊಳ್ಳುವುದು ಅಲ್ಲ ಸ್ವಾಮಿ. ನಾನು ಆಯ್ಕೆಯಾದ ಕ್ಷೇತ್ರದ ಜನರ ರಕ್ಷಣೆಯನ್ನು ಮಾಡಲಿಕ್ಕೆ ಸಾಧ್ಯವಾಗಲಿಲ್ಲ ಎಂದರೆ, ಇವರ ಬಗ್ಗೆ ಕಿಂಚಿತ್ತು ಕನಿಕರದಿಂದ ಅವರ ರಕ್ಷಣೆಯನ್ನು ಮಾಡಲಿಕ್ಕೆ ಸಾಧ್ಯವಾಗದಿದ್ದರೆ ಈ ಸದನ ಸದಸ್ಯನಾಗಿ ಮುಂದುವರಿಯಲಿಕ್ಕೆ ಅಧಿಕಾರ ನನಗೂ ಸಹ ಇಲ್ಲ ನಿಮಗೂ ಸಹ ಇಲ್ಲ. ಇದನ್ನು ನಾವುಗಳು ಮನವರಿಕೆಯನ್ನು ಮಾಡಿಕೊಳ್ಳಬೇಕಾಗಿದೆ. ಬಹುಶಃ ಎಲ್ಲಾ ರೀತಿಯಿಂದಲೂ ಯೋಚನೆಯನ್ನು ಮಾಡಬೇಕು ಎಂಬ ಪ್ರಶ್ನೆಯನ್ನು ಬಂದಾಗ ಎಲ್ಲಾ ವಿಚಾರಗಳ ಬಗ್ಗೆ ಬಹುಶಃ ನಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ನಾಲ್ಕು ಕೊಲೆಗಳು ನಡೆದಿದ್ದು 4 ಕೊಲೆಗಳ ಬಗ್ಗೆ ಸಿ.ಬಿ.ಡಿ. ತನಿಖೆಯ ಬಗ್ಗೆ ಒತ್ತಾಯಿಸಿದ್ದೆ ಅದನ್ನು ನಮ್ಮ ಸರ್ಕಾರದವರು ಸಿ.ಬಿ.ಡಿ. ತನಿಖೆಯನ್ನು ನಡೆಸಿದರು. ಅವನು ಬಡವ ಅವನ್ನು ಮತ್ತೊಬ್ಬ, ಅವನಲ್ಲಿ ಹಣ ಇಲ್ಲ, ಎಂಬ ಬಗ್ಗೆ ನಿರ್ಲಕ್ಷ್ಯವನ್ನು ಯಾರ ಬಗ್ಗೆಯೂ ಮಾಡಲಿಲ್ಲ. ಎಲ್ಲಾ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸಿ.ಬಿ.ಡಿ ತನಿಖೆಯ ಬಗ್ಗೆ ಒತ್ತಾಯವನ್ನು ಮಾಡಿದ್ದೇವು. ಆದುದರಿಂದ ಈಗ ನಾವು ಸಿ.ಬಿ.ಐ. ತನಿಖೆಗಾಗಿ ಒತ್ತಾಯವನ್ನು ಪದೇ ಪದೇ ಮಾಡುತ್ತಿದ್ದೇವೆ. ಈಗ ಒಂದು ನಿರ್ಧಾರವನ್ನು ತೆಗೆದುಕೊಳ್ಳಿ ನೀವು ಅದನ್ನು ಸಿ.ಬಿ.ಐ. ನವರಿಗೆ ಕೊಡಲಿಕ್ಕೆ ಆಗದಿದ್ದರೆ, ಅದು ನಿಮ್ಮ ಪ್ರತಿಷ್ಠೆಯೇ ಆದರೆ ಅದರಲ್ಲಿಯೇ ನಿಮಗೆ ಸಂತೋಷ ಸಿಗುವುದಾದರೆ ಆ ಸಂತೋಷದಲ್ಲಿ ನನಗೆ ದುಃಖ ಇದೆ. ಇವತ್ತು ಅಧಿಕಾರ ಶಾಶ್ವತವಲ್ಲ. ಅಧಿಕಾರ ಬರುತ್ತದೆ ನಾಳೆ ಅಧಿಕಾರ ಹೋಗಬಹುದು. ಹತ್ತೂವರೆ ತಿಂಗಳುಗಳಿಂದ ಕುಂದಾಪುರದಲ್ಲಿ ಸತ್ಯಾಗ್ರಹ ನಡೆಯುತ್ತಿದೆ ಆ ಕುಂದಾಪುರ ರಸ್ತೆಯಲ್ಲಿ ಮಂತ್ರಿಗಳು ಹೋಗುತ್ತೀರಿ. ಆದರೆ ಆ ಉಪವಾಸವನ್ನು ಮಾಡುತ್ತಿರತಕ್ಕಂತಹ ಜನರ ಬಗ್ಗೆ ಕಾಳಜಿ ಇಲ್ಲವೇ ನಿಮಗೆ? ಕೊನೆಯ ಪಕ್ಷ ಅವರ ಬಗ್ಗೆ ಸೌಜನ್ಯವಾದರೂ ಇದೆಯಾ ನಿಮಗೆ? ನಿಮ್ಮ ಆತ್ಮಸಾಕ್ಷಿಯಾಗಿ ಹೇಳಿ, ನಿಮಗೆ ಅವರ ಬಗ್ಗೆ ಹೋಗಿ ವಿಚಾರಿಸುವುದು ನಿಮ್ಮ ಪ್ರತಿಷ್ಠೆಗೆ ಕುಂದು ಬರುತ್ತದೆಂದು ಹೇಳಿ ಅದನ್ನು ಬಿಟ್ಟು ಯಾರೋ ಹೇಳಿದ್ದನ್ನು ಕೇಳಿ ಅಥವಾ ಯಾವುದಾದರೂ ಉದ್ದೇಶವನ್ನು ಇಟ್ಟುಕೊಂಡಿರತಕ್ಕಂತಹ ಭಾವನೆಯಿಂದ ಈ ರೀತಿಯಾಗಿ ಮಾಡುವುದು ಉದ್ದೇಶವನ್ನು ಇಟ್ಟುಕೊಂಡಿರತಕ್ಕಂತಹ ಭಾವನೆಯಿಂದ ಈ ರೀತಿಯಾಗಿ ಮಾಡುವುದು ಸಮಂಜಸವಲ್ಲ. ಬಹುಶಃ ಅಧಿಕಾರವು ಇವತ್ತು ನಿಮ್ಮಲ್ಲಿ ಇರಬಹುದು ನಾಳೆ ಬೇರೆಯವರಿಗೆ ಹೋಗಬಹುದು. ಆದರೆ ನೀವು ಇರತಕ್ಕಂತಹ ಸಮಯದಲ್ಲಿ ಏನು ತಪ್ಪು ನಡೆಯುತ್ತಿದೆ ಅದನ್ನು ನಿರ್ಲಕ್ಷಿಸುವುದು ಸಮಂಜಸವಲ್ಲ ಎನ್ನತಕ್ಕಂತಹ ಮಾತನ್ನು ಈ ಸದನದಲ್ಲಿ ಹೇಳುತ್ತಾ ನಾನು ಕೇಳಿದ್ದೇ ಕೇಳುತ್ತಾ ಇರುವುದು ಅದೇ ರೀತಿಯಾದ ಇವರುಗಳು ಕಳೆದ ಸಾರಿಯೂ ಹೇಳಿದ ಉತ್ತರವನ್ನೇ ಮತ್ತೆ ಮತ್ತೆ ಕೊಡುವುದನ್ನು ನೋಡಿ ನನಗೆ ಬಹಳ ಬೇಸರವಾಗಿದೆ. ನಿಮಗೆ ಯಾವ ತೊಂದರೆ ಇದೆ, ಅಥವಾ ನಿಮಗೆ ಯಾವ ತಾಂತ್ರಿಕ ತೊಂದರೆ ಇದೆ ಎಂಬುದನ್ನು ತಿಳಿಸಿ. ಹಿಂದೆಯೂ ಸಹ ಇದರ ಬಗ್ಗೆ ಒತ್ತಾಯವನ್ನು ಮಾಡಿದೆ. ಈಗಲೂ ಸಹ ಈ ವಿಷಯವನ್ನು ತಮ್ಮ ಮುಂದೆ ತಂದಿರುತ್ತೇನೆ. ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧಾ (ಗೃಹ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ

ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಪ್ರತಾಪಚಂದ್ರ ಶೆಟ್ಟಿಯವರು ಹೇಳಿರತಕ್ಕಂತಹ ವಿಚಾರಗಳಲ್ಲಿ ಅನೇಕ ವಿಷಯಗಳ ಸತ್ಯಾಂಶ ಇದೆ. ಈ ವಿಚಾರವನ್ನು ಹಿಂದೆಯೂ ಪ್ರಸ್ತಾಪ ಮಾಡಿದ್ದಾರೆ. ಮತ್ತೆ ಕುಂದಾಪುರ ತಾಲ್ಲೂಕಿಗೆ ನಾನು ಇದುವರೆಗೂ ಪ್ರವಾಸವನ್ನು ಹಾಕಿಲ್ಲ. ಖಾಸಗಿ ಕೆಲಸದ ಮೇಲೆ ನನ್ನ ಕುಟುಂಬದವರ ಜೊತೆಯಲ್ಲಿ ನಾನು ದಕ್ಷಿಣ ಕನ್ನಡ ಜಿಲ್ಲೆಯ ಕೊಲ್ಲೂರಿಗೆ ಹೋಗಿದ್ದಂತಹ ಸಂದರ್ಭದಲ್ಲಿ ಕುಂದಾಪುರದ ಮೂಲಕ ಹೋಗಿದ್ದೆ. ಅವರುಗಳು ಸತ್ಯಾಗ್ರಹ ಕುಳಿತಿದ್ದಾರೆಂದು ತಿಳಿದಿದ್ದರೆ ನಾನು ಭೇಟಿ ಮಾಡುತ್ತಿದ್ದೆ. ನನಗೆ ಇದರಲ್ಲಿ ವೈಯಕ್ತಿಕವಾದಂತಹ ಪ್ರತಿಷ್ಠೆ, ಅಥವಾ ಅದನ್ನು ಮಾಡಲೇ ಬಾರದು ಅಥವಾ ಏನೋ ನನಗೆ ತೊಂದರೆಯಾಗಿ ಬಿಡುತ್ತದೆ, ಅವರು ಧರಣಿ ಮಾಡಿದರೂ ಸಹಿತ ನಾನು ಇದನ್ನು ಅನೌನ್ಸ್ ಮಾಡದೇ ಇದ್ದುದ್ದರಿಂದ ನನ್ನ ದೊಡ್ಡತನವನ್ನು ಹೆಚ್ಚಿಸಿಕೊಳ್ಳುತ್ತೇನೆ ಎನ್ನುವ ವಿಚಾರ ಇಲ್ಲ ಎನ್ನುವುದು ಅವರ ಆತ್ಮಕ್ಕೂ ಸಹಿತ ಚೆನ್ನಾಗಿ ಗೊತ್ತಿದೆ. ಅವರು ಆತ್ಮಸಾಕ್ಷಿಯಾಗಿ ಮಾತನಾಡ ಬೇಕೆಂದು ಹೇಳಿದರು. ನಾನು ಆತ್ಮಸಾಕ್ಷಿಯಾಗಿ ಮಾತನಾಡುತ್ತಿದ್ದೇನೆ. ಅವರಿಗೆ ಗೊತ್ತಿದೆ ಆ ರೀತಿಯಾದ ಪ್ರತಿಷ್ಠೆ ನಮ್ಮ ಮುಂದೆ ನನಗೆ ಇಲ್ಲ ಎನ್ನುವಂಥದ್ದು. ಅಥವಾ ಈ ಅಧಿಕಾರ ಶಾಶ್ವತವಾಗಿ ಗೂಟವನ್ನು ಹೊಡೆದುಕೊಂಡು ನಾವು ಇಲ್ಲಿ ಕುಳಿತುಕೊಳ್ಳುತ್ತೇವೆಂದು ನಾವು ಯಾರೂ ತಿಳಿದುಕೊಂಡಿಲ್ಲ. ಪ್ರಜಾತಂತ್ರದ ವ್ಯವಸ್ಥೆಯಲ್ಲಿ ನಾವು ವಿರೋಧ ಪಕ್ಷದಲ್ಲಿಯೂ ಕುಳಿತು ಕೊಂಡಿದ್ದೇವೆ ಆಗ ಕೆಲವು ಸದಸ್ಯರುಗಳು ಆಡಳಿತ ಪಕ್ಷದ ಕಡೆಯಲ್ಲಿ ಕುಳಿತುಕೊಂಡಿದ್ದರು. ಇದೆಲ್ಲಾ ಸರ್ಕಸಗಳು ನಡೆಯುತ್ತಲೇ ಇರುತ್ತವೆ. ಇದು ಜನಗಳ ಇಷ್ಟ ಆದರೆ ನಾವು ಮಾಡತಕ್ಕಂತಹ, ತೆಗದುಕೊಳ್ಳತಕ್ಕಂತಹ ಯಾವುದೇ ವಿಚಾರಗಳ ಬಗ್ಗೆ ಮುಂದೆ ಬರತಕ್ಕಂಥವರು ಸ್ಕೂಟನಿಮಾಡುತ್ತಾರೆ, ಪ್ರಿಸಿಡೆಂಟಗಳು ಆಗುತ್ತವೆ ಎನ್ನುವುದನ್ನು ನಾವು ಗಮನದಲ್ಲಿ ಇಟ್ಟುಕೊಂಡು ಪ್ರಜಾತಂತ್ರದ ಚೌಕಟ್ಟಿನಲ್ಲಿ ನಿಯಮಾವಳಿಗಳಿಗೆ ಅನುಸಾರವಾಗಿ ನಾವು ಕೆಲಸವನ್ನು ಮಾಡಬೇಕಾಗುತ್ತದೆ. ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಬೇಳುತ್ತೇನೆ. ಹತ್ತೂವರೆ ತಿಂಗಳು ಸತ್ಯಾಗ್ರಹವನ್ನು ಮಾಡಿರತಕ್ಕಂಥದ್ದು ನಿಜ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಹಾಗೆ ಈ ವಿಚಾರದಲ್ಲಿ ತಮಗೂ ಸಹಿತ ತಿಳಿದಿದೆ ವಿಚಾರ, ಅಧ್ಯಕ್ಷರ ಕೊಠಡಿಯಲ್ಲಿ ನಾವೆಲ್ಲರೂ ಕುಳಿತುಕೊಂಡು ವಿಚಾರವನ್ನು ಮಾಡಿದ್ದೇವೆ. ಇದರಲ್ಲಿ ಸರ್ಕಾರವನ್ನು ಅಪಾದನೆ ಮಾಡತಕ್ಕಂತಹ ವಿಚಾರ ಏನೂ ಸಹಿತ ಇಲ್ಲ. ನಿಷ್ಪಕ್ಷಪಾತವಾದ ತನಿಖೆಯಾಗಬೇಕು ಎನ್ನತಕ್ಕಂತಹ ವಿಚಾರ ಕೂಡ ಹೌದು. ಅದರಲ್ಲಿ ಏನೂ ಸಂಶಯ ಇಲ್ಲ. ಮಾನ್ಯ ಪ್ರತಾಪಚಂದ್ರಶೆಟ್ಟಿಯವರು ಹೇಳಿದ ಹಾಗೆ 8ನೇ ಏಪ್ರಿಲ್ 1995ನಲ್ಲಿ ಅವರು ಮಾನ್ಯ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಒಂದು ಪತ್ರವನ್ನು ಕೂಡ ಬರೆದಿದ್ದಾರೆ. ಒಬ್ಬ ಉನ್ನತಾಧಿಕಾರಿಯಿಂದ ಇದನ್ನು ತನಿಖೆ ಮಾಡಿಸಬೇಕೆಂದು ಹೇಳಿದ್ದಾರೆ. ಉನ್ನತಾಧಿಕಾರಿಗಳು ಎಂದರೆ ಎಸ್.ಪಿ. ಅಥವಾ ಡಿ.ಐ.ಜಿ. ಮಟ್ಟದ ಅಧಿಕಾರಿಗಳ ಮೂಲಕವಾಗಿ ನಮ್ಮ ಸಿ.ಐ.ಡಿ. ಮೂಲಕವೇ ನಾವು ಎನಕ್ವೈರಿಯನ್ನು ಮಾಡಿಸುತ್ತಿದ್ದೇವೆ. ಈಗ ಇದು ಯಾವ ಹಂತದಲ್ಲಿದೆ ಎಂದರೆ ನಾವು ಛಾರ್ಜ್‌ಶೀಟ್ ಹಾಕಿದ್ದೇವೆ. ಎಲ್ಲಾ ವಿಚಾರಗಳನ್ನೂ ನಾವು ಮಾನ್ಯ ಸಭಾಧ್ಯಕ್ಷರ ಕೊಠಡಿಯಲ್ಲಿ ಕೂತು ಚರ್ಚೆ ಮಾಡಿದ್ದೇವೆ ಅವತ್ತು ಸಂಸದೀಯ ವ್ಯವಹಾರಗಳ ಸಚಿವರಿದ್ದರೂ,

ಮಾನ್ಯ ಮುಖ್ಯಮಂತ್ರಿಗಳಿದ್ದರು, ಮಾನ್ಯ ಸಭಾಧ್ಯಕ್ಷರು ಇದ್ದರು, ಇವರೂ ಇದ್ದರು. ನಾವು ಎಲ್ಲಾ ವಿಚಾರಗಳನ್ನೂ ಚರ್ಚೆಮಾಡಿದ್ದೆವು. ಮಾರ್ಚ್ 19ನೇ ತಾರೀಖು ಈ ವಿಚಾರ ಈಗ ಸೆಕ್ಷನಗೆ ಕಮಿಟ್ ಆಗುವಂಥ ಸಂದರ್ಭ ಕೂಡ ಇದೆ. ಈ ಸನ್ನಿವೇಶದಲ್ಲಿ ಅಂದರೆ 19ನೇ ಮಾರ್ಚಿಯಂದು ಕಮಿಟ್‌ಮೆಂಟ್ ಆಗುತ್ತದೆ. ಈ ಸ್ಟೇಜನಲ್ಲಿ ಫರ್ದರ್ ಏವಿಡೆನ್ಸ್ ಏನಾದರೂ ಸಿಕ್ಕಿದರೆ, ಮತ್ತೊಂದು ಆಗಿದೆ ಎಂದು ಹೇಳುವುವಾದರೆ ಅನಂತರ ಏನಾದರೂ ಒಂದು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈಗಾಗಲೇ ಉನ್ನತಮಟ್ಟದ ಅಧಿಕಾರಿಗಳು ಹೋಗಿ ಡೀಟೇಲ್ ಆಗಿ ಸಿ.ಓ.ಡಿ. ಎನಕ್ವೈರಿ ಮಾಡಿದ್ದಾರೆ. ನನಗೆ ನಮ್ಮ ಸಿ.ಓ.ಡಿ.ಯ ಉನ್ನತ ಮಟ್ಟದ ಅಧಿಕಾರಿಗಳ ಮೇಲೆ ಸಂಪೂರ್ಣವಾದ ನಂಬಿಕೆ, ವಿಶ್ವಾಸ ಇದೆ. ನಾನು ನಿರ್ಮಾಣೆಯಿಂದ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರೇ ಹೇಳಿದಂತೆ ಇದರಲ್ಲಿ ಸರ್ಕಾರಕ್ಕೆ ಯಾವುದೇ ಇಂಟರೆಸ್ಟ ಇಲ್ಲ. ಇದನ್ನು ಒಂದು ದೊಡ್ಡ ಪ್ರತಿಷ್ಟೆಯಾಗಿ ಮಾಡಿಕೊಳ್ಳುವುದಕ್ಕೂ ನಾವು ತಯಾರಿಲ್ಲ. ಇನ್ವೆಸ್ಟಿಗೇಟ್ ಮಾಡಬೇಕೆಂದು ಹೇಳಿದ್ದೇವೆ. ಅವರೂ ಕೂಡ ನಮಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆಂದೂ ನಾವು ಹೇಳುವುದಿಲ್ಲ. ಸಿ.ಓ.ಡಿ. ಉನ್ನತ ಮಟ್ಟದ ಅಧಿಕಾರಿಗಳು ಏನು ತನಿಖೆ ಮಾಡಿದ್ದಾರೆ ಅದನ್ನು ಅವರು ಛಾರ್ಜ್ ಶೀಟಿನಲ್ಲಿ ಹಾಕಿದ್ದಾರೆ. ಇನ್ನೂ ಏನಾದರೂ ಇದ್ದರೆ ಅವರು ಸಿ.ಓ.ಡಿ. ಅಧಿಕಾರಿಗಳನ್ನು ಭೇಟಿ ಮಾಡಲಿ. ಅವರಿಗೇ ಹೇಳಲಿ. ನನ್ನ ಹತ್ತಿರ ಇವರು ಹೇಳುವುದರಿಂದ ಏನೂ ಉಪಯೋಗವಿಲ್ಲ. ಇನ್ವೆಸ್ಟಿಗೇಟಿಂಗ್ ಅಧಿಕಾರಿಗಳಿದ್ದಾರೆ. ಸಿ.ಓ.ಡಿ.ನಲ್ಲಿ ಅತ್ಯಂತ ಹೆಚ್ಚು ನಂಬಿಕಾರ್ಹ ಅಧಿಕಾರಿಗಳಿದ್ದಾರೆ, ನಿಷ್ಠಾವಂತ ಅಧಿಕಾರಿಗಳಿದ್ದಾರೆ ಡಿ.ಜಿ. ಮಟ್ಟದ ಅಧಿಕಾರಿಗಳು ಅಲ್ಲಿದ್ದಾರೆ. ಅವರು ಇನ್ನೂ ಹೆಚ್ಚಿನ ತನಿಖೆಯನ್ನು ಬೇಕಾದರೂ ಮಾಡುತ್ತಾರೆ. ಇಂಥ ಛಾರ್ಜಶೀಟ್ ಹಾಕಿ ಸೆಕ್ಷನ್‌ಗೆ ಕಮಿಟ್ ಆಗುವಂಥ ಸಂದರ್ಭದಲ್ಲಿ ಸಿ.ಬಿ.ಐ.ಗೆ ಕೊಟ್ಟಿರುವಂಥ ಪ್ರಿಸಿಡೆಂಟ್ ಇಲ್ಲ. ಈ ಸನ್ನಿವೇಶದಲ್ಲಿ ಮಾನ್ಯ ಸದಸ್ಯರು ಹೇಳುವುದನ್ನು ಮಾಡಬೇಕಾದರೆ ಕಷ್ಟವಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾವುದೇ ಪ್ರಿಸಿಡೆಂಟ್ ಇಲ್ಲವೆಂದು ತಾವು ಹೇಳುತ್ತಿದ್ದೀರಿ. ಆದರೆ ಛಾರ್ಜ್ ಶೀಟನ್ನು ಹಾಕಿದಮೇಲೂ ಕೂಡ ಸಿ.ಬಿ.ಐ.ಗೆ ರೆಫರ್ ಮಾಡಬಹುದೆಂದು ಕೆಲವು ಸುಪ್ರೀಂ ಕೋರ್ಟಿನ ಡಿಸಿಷನ್ಸ್ ಇವೆ. ಬೇಕಾದರೆ ಕೆಲವು ಲಾಯರ್ಸ್‌ಗೆ ತೋರಿಸಬಹುದು. ಮಾನ್ಯ ಅಸ್ಕರ್ ಫರ್ನಾಂಡೀಸ್ ಕೋರ್ಟ್ ಮಾಡಿಕೊಟ್ಟಿದ್ದಾರೆ. ಸಿ.ಬಿ.ಐ.ಗೆ ಒಪ್ಪಿಸಬೇಕೆಂದು ನಾವು ಏತಕ್ಕೆ ಒತ್ತಾಯ ಮಾಡುತ್ತಿದ್ದೇವೆಂದರೆ, ಇಲ್ಲಿರತಕ್ಕ ಸಿ.ಓ.ಡಿ.ನಲ್ಲಿ ಯಾರೇ ಉನ್ನತಾಧಿಕಾರಿ ಕೆಲಸ ಮಾಡುತ್ತಿರಬಹುದು, ಅವರ ಮೇಲೆ ನಮಗೆ ವಿಶ್ವಾಸ ಇಲ್ಲವೆಂದು ನಾನು ಹೇಳುತ್ತಿಲ್ಲ. ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಹೇಳಿದಂತೆ ಕೇರಳ ಮತ್ತು ಬೊಂಬಾಯಿಂದ ಕೊಲೆಗಡುಕರು ಬಂದು ಮಂಗಳೂರಿನಲ್ಲಿ ಇಂಥ ಕೃತ್ಯಗಳನ್ನು ಮಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಈ ಕೃತ್ಯ ಇಂಟರ್ ಸ್ಟೇಟ್‌ಗೆ ಸಂಬಂಧಪಟ್ಟಿರುವುದರಿಂದ ಇದು ನಮ್ಮ ಪೋಲೀಸ್ ವ್ಯಾಪ್ತಿಯಲ್ಲಿ ಬಾರದೇ ಇರುವ ಕಾರಣ ಇದೆಲ್ಲವನ್ನೂ ನಾವು ಕಂಡು ಹಿಡಿಯಬೇಕಾದರೆ ಇದನ್ನು ಸಿ.ಬಿ.ಐ.ಗೆ ಒಪ್ಪಿಸಿದರೆ ಮಾತ್ರ ಅದು ಬಾಂಬೆಯಲ್ಲಾಗಲಿ,

ಕರ್ನಾಟಕದಲ್ಲಾಗಲಿ ಕೇರಳದಲ್ಲಾಗಲಿ, ಅವರು ಸುತ್ತಾಡಿ ಇದನ್ನು ಪತ್ತೆ ಮಾಡಬಹುದು. ಇಂಥಹ ಕೊಲೆಗಡುಕರಿಗೆ, ಗೂಂಡಾಗಳಿಗೆ ಇಬ್ಬಿಲ್ಲ ನೀವು ಹಿಡಿದು ಹಾಕಿದರೆ ಮುಂದ ಆಗುವಂಥ ಇಂಥ ಕೊಲೆಗಡುಕತನಗಳು ನಿಂತುಹೋಗುತ್ತವೆ. ಈ ದೃಷ್ಟಿಯಿಂದ ನಾವು ಇದರ ಬಗ್ಗೆ ಸಿ.ಬಿ.ಐ. ಎನಕ್ವೈರಿಗೆ ಕೇಳುತ್ತಿದ್ದೇವೆ. ಬಹಳ ಸೂಕ್ಷ್ಮವಾಗಿ ನಾನು ತಮಗೆ ಮೊದಲೇ ಹೇಳಿದೆ. ಸ್ಥಳೀಯವಾಗಿ ಅನೇಕ ಜನರು ಲೋಕಲ್ ಪೋಲೀಸರ ಎದುರಿನಲ್ಲೇ ತಮ್ಮ ಅನಿಸಿಕೆಗಳನ್ನು ಹೇಳುತ್ತಿಲ್ಲ. ಏಕೆಂದರೆ ಒಬ್ಬರಮೇಲೆ ಒಬ್ಬರು ನಾವು ಹೇಳಿಕೊಂಡು ಬತಕ್ಕೆ ಕೆಟ್ಟವರಾಗಬೇಕು ಎಂದು ಹೇಳುವುದಕ್ಕೆ ಮುಂದೆ ಬರುತ್ತಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಇದನ್ನು ನೇರವಾಗಿ ನೀವು ಸಿ.ಬಿ.ಐ.ಗೆ ಒಪ್ಪಿಸಿದರೆ ಅವರು ಬೊಂಬಾಯಿಯಲ್ಲಾಗಲಿ, ಕೇರಳದಲ್ಲಾಗಲಿ, ಇರುವ ಜನರನ್ನೆಲ್ಲಾ ಇಂಟರಾಗೇಟ್ ಮಾಡಿಕೊಂಡು ಇದರ ಮೂಲವನ್ನುಪತ್ತೆ ಹಚ್ಚಿ ಬಂದು ಕ್ರಮ ತಗೆದುಕೊಳ್ಳುವುದಕ್ಕೆ ಸಾಧ್ಯ ಆಗುತ್ತದೆ. ಆದ್ದರಿಂದ ತಾವು ಇದರ ಬಗ್ಗೆ ಪ್ರತಿಷ್ಠೆ ತೋರಿಸಬೇಡಿ, ಇದಕ್ಕೆ ಒಪ್ಪಿಕೊಳ್ಳಿ. ಇದನ್ನು ಬಿಟ್ಟು ಇಲ್ಲಿ ದಿನಕರ್‌ರವರು ಸರಿಯಾಗಿಲ್ಲ, ಇನ್ನೊಬ್ಬರು ಸರಿಯಾಗಿಲ್ಲ ಎಂದು ನಾವು ಯಾರೂ ಹೇಳಲ್ಲ. ಅಥವಾ ಅಲ್ಲಿ ಎಸ್.ಪಿ ಯವರು ಸರಿಯಾಗಿಲ್ಲ ಎಂದು ಹೇಳಿದ್ದೇವಾ? ಇದು ಇಂಟರ್ ಸ್ಟೇಟ್ ಸಮಸ್ಯೆಯಾಗಿರುವುದರಿಂದ ಇದು ಬಗೆಹರಿಯಬೇಕಾದರೆ ಸಿ.ಬಿ.ಐ.ಗೆ ಪಹಿಸಬೇಕು ಇದರಲ್ಲಿ 3 ರಾಜ್ಯಗಳದ್ದು ಇನವಾಲ್ವ್‌ಮೆಂಟ್ ಇವೆ. ಇದರಲ್ಲಿ ಕೇರಳದವರು ಇದ್ದಾರೋ, ಬೊಂಬಾಯಿಯವರು ಇದ್ದಾರೋ ಅಥವಾ ಕರ್ನಾಟಕದವರು ಇದ್ದಾರೋ ನೋಡಬೇಕಾಗಿದೆ. ಇದನ್ನು ತಾವು ದಯವಿಟ್ಟು ಪ್ರತಿಷ್ಠೆಯ ಪ್ರಶ್ನೆಯಾಗಿ ಮಾಡಿಕೊಳ್ಳಬೇಡಿ. ತಮ್ಮಲ್ಲಿ ಇನ್ನೊಮ್ಮೆ ಕೇಳಿಕೊಳ್ಳುತ್ತೇನೆ, ಇದನ್ನು ಸಿ.ಬಿ.ಐ.ಗೆ ಒಪ್ಪಿಸಿ. ಈಗಾಗಲೇ ಇದಕ್ಕೆ ತಮ್ಮ ಕನ್ಸೆಂಟ್ ಟೆಲಿಗ್ರಾಂ ಮೂಲಕ ಕೊಟ್ಟಿದ್ದೀರೆಂದು ನಮಗೆ ಗೊತ್ತಾಗಿದೆ. ಆದರೆ ಇದನ್ನು ಏತಕ್ಕೆ ಮುಚ್ಚಿಡುತ್ತಿದ್ದೀರೋ ನನಗೆ ಗೊತ್ತಾಗುತ್ತಿಲ್ಲ. ಆದರೆ ಈ ಹಂತದಲ್ಲಿ ನೀವು ಇದನ್ನು ನಿಲ್ಲಿಸಿದರೆ, ಇದು ನಿಮ್ಮಿಂದ ನಿಂತುಹೋಯಿತೆಂಬ ಮಾತು ಮುಂದೆ ಬರಬಾರದು. ದಯವಿಟ್ಟು ಇದನ್ನು ಸಿ.ಬಿ.ಐ.ಗೂ ರೆಫರ್ ಮಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಯಾವ ಅಧಿಕಾರಿಗಳ ಹೆಸರನ್ನೂ ನಾನು ಇಲ್ಲಿ ಹೇಳಿಲ್ಲ. ಅವರಿಗೆ ಇದರಲ್ಲಿ ವಿಶ್ವಾಸ ಇಲ್ಲವೆಂದು ಹೇಳಿಲ್ಲ. ಈ ಇಡೀ ಸದನದ ವಿಶ್ವಾಸ ಸಿ.ಬಿ.ಡಿ. ಅಧಿಕಾರಿಗಳ ಬಗ್ಗೆ ಇದೆ. ಇದರಲ್ಲಿ ಇಂಟರ್ ಸ್ಟೇಟ್ ಕನಕ್ಷನ್ ಇದೆ ಎಂಬುದಕ್ಕೆ ಏನಾದರೂ ಸ್ವಲ್ಪವಾದರೂ ಎವಿಡೆನ್ಸ್ ಸಿಕ್ಕಿದೆ ಎಂದು ಹೇಳುವಾದರೆ ಒಪ್ಪಿಕೊಳ್ಳಬಹುದು. ಅವರೇ ಹೇಳಿದ್ದಾರೆ, ಈ ರೀತಿ ಬೇರೆ ಬೇರೆ ರಾಜ್ಯಗಳವರು ಇವರಲ್ಲಿದ್ದಾರೆಂದು ಹೇಳಿದ್ದಾರೆ. Nothing prevents our police officers to go to neighbouring states and conduct enquiry and arrest the culprits. ಇದರಲ್ಲಿ ಏನೂ ದೋಷವಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲಿನ ಎಂ.ಎಲ್.ಎ.ರವರೇ ಚಾರ್ಜ್ ಮಾಡುತ್ತಿದ್ದಾರೆ

ಬೊಂಬಾಯಿಂದ, ಕೇರಳದಿಂದ ಜನರು ಬಂದು ಈ ಕೊಲೆ ಮಾಡುತ್ತಿದ್ದಾರೆ ಎಂದು ಅವರೇ ಹೇಳುತ್ತಿದ್ದಾರೆ ಅಂದ ಮೇಲೆ ಇದಕ್ಕಿಂತ ಇನ್ನೇನು ಬೇಕು? ಇದಕ್ಕೆ ಐ ವಿಟ್ನೆಸ್ ಇರಬೇಕೆ? ಬಾಂಬೆಯವರೇ ಇಂದು ಇದನ್ನು ಮಾಡುತ್ತಿದ್ದಾರೆ, ಕೇರಳದವರೇ ಬಂದು ಮಾಡುತ್ತಿದ್ದಾರೆ, ಈ ಕಾರಣದಿಂದಾಗಿ ಈ ಸಮಸ್ಯೆ ಇಷ್ಟೊಂದು ಉಲ್ಬಣಗೊಂಡಿದೆ ಎಂದು ಅವರೇ ಹೇಳುತ್ತಿದ್ದಾರೆ. ನಾವು ಸಿ.ಜಿ.ಐ. ಎನಕ್ವೈರಿ ಮಾಡುವುದಕ್ಕೆ ತಯಾರಿಲ್ಲ ಎಂದು ಹೇಳುವುದಾದರೆ, ನೀವು ಸಿ.ಜಿ.ಐ. ಎನಕ್ವೈರಿಗೆ ಒಪ್ಪಿಕೊಳ್ಳುವವರಿಗೂ ನಾವು ಇಲ್ಲೇ ಕುಳಿತುಬಿಡುತ್ತೇವೆ. ನಿಮ್ಮ ಮನಸ್ಸಿಗೆ ಯಾವಾಗ ಬರುತ್ತದೆಯೋ ಆವಾಗ ಮಾಡಿ.

ಶ್ರೀ ಮಂಜುನಾಥ ಸಿ. ಕುನ್ನೂರು : ಮಾನ್ಯ ಸಭಾಧ್ಯಕ್ಷರೆ, ಕಳೆದ ಹತ್ತೂವರೆ ತಿಂಗಳಿಂದ ಇಡೀ ರಾಜ್ಯದಲ್ಲಿ ಸತ್ಯಾಗ್ರಹ ನಡೆಯುತ್ತಿದೆ ಎಂದರೆ ಇದು ಎಷ್ಟುಗಹನ ವಿಚಾರ ಎಂಬುದನ್ನು ತಾವೇ ಯೋಚನೆ ಮಾಡಿ ನೋಡಿ.

(ಈ ಹಂತದಲ್ಲಿ ಮಾನ್ಯ ಅಂದದಗಟ್ಟಿ, ಮಲ್ಲಿಕಾರ್ಜುನ ಖರ್ಗೆ, ಕಾಗೋಡು ತಿಮ್ಮಪ್ಪ, ಸಗೀರ್ ಅಹ್ಮದ್, ಶಿವರಾಮು, ವಿ.ಎಸ್. ಕೌಜಲಗಿ, ಮಂಜುನಾಥ ಸಿ. ಕುನ್ನೂರು, ಡಾ. ಮಲಕರೆಡ್ಡಿ, ಇನ್ನೂ ಮುಂತಾದವರು ಮಾನ್ಯ ಸಭಾಧ್ಯಕ್ಷರ ಪೀಠದ ಮುಂದಿರುವ ಅವರಣದಲ್ಲಿ ಬಂದು ಧರಣಿ ಕುಳಿತರು).

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಬೇರೆ ಇನ್ನೇನು ಮಾಡುವುದಕ್ಕೆ ಸಾಧ್ಯವಾಗುತ್ತದೆ? ನಾವು ಕೂಗಾಟ, ಹೊಡೆದಾಟ ಬಡಿದಾಡ ಮಾಡುವುದಕ್ಕಾಗುತ್ತದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೇ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ಕಾಗೋಡು ತಿಮ್ಮಪ್ಪನವರು, ಇವರೆಲ್ಲಾ ಹಿಂದೆ ಮಂತ್ರಿಗಳಾಗಿ ಆಡಳಿತವನ್ನು ನಡೆಸಿರುವವರು. ನಾನು ಈಗಲೂ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿ ಯಾರಮೇಲಾದರೂ ಅನುಮಾನ ಇದ್ದರೆ, ಅಥವಾ ಫರ್ದರ್ ಎವಿಡೆನ್ಸ್ ಏನಾದರೂ ಇದ್ದರೆ ಅದನ್ನು ಅವರು ಕೊಟ್ಟರೆ ಒಪ್ಪಿಕೊಳ್ಳಬಹುದು. ಆದರೆ ಅವರ ಇಲ್ಲಿ ಎವಿಡೆನ್ಸ್ ಕೊಡುವುದಾದರೆ ಅದನ್ನು ನಾನು ತೆಗದುಕೊಳ್ಳುವುದಕ್ಕಾಗುವುದಿಲ್ಲ. Any further evidence, if they have got, they have to give it to police officers. The Government assures that the Director General of Police, who is supposed to be man of greatest integrity, he himself will took into the matter and further investigate. That much assurance I can give.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ನಾನು ಮೊದಲು ಮಾತನಾಡುವಾಗಲೇ ಹೇಳಿದ್ದೇನೆ. ಇಂಥದೇ ವ್ಯವಸ್ಥೆ ಆಗಬೇಕೆಂದು ಹೇಳುವುದಿಲ್ಲ. ಆದರೆ ಸಿ.ಜಿ.ಐ. ಎನಕ್ವೈರಿ ಆಗಬೇಕೆಂಬುದು ನನ್ನ ಒತ್ತಾಯ ಅಲ್ಲಿ ನಾವಂತೂ ಸಂಪೂರ್ಣವಾಗಿ ನಂಬಿಕೆಯನ್ನು

ಕಳೆದುಕೊಂಡಿದ್ದೇವೆ. ನಾವು ಆ ತನಿಖೆ ಮಾಡಿಸಿದ್ದೇವೆ, ಈ ತನಿಖೆ ಮಾಡಿಸಿದ್ದೇವೆ ಎಂದು ಅವರು ಹೇಳಿದರು. ನಾನು ಆ ವಿಚಾರವನ್ನೆಲ್ಲಾ ಇಲ್ಲಿ ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ. ಕಂಟೆಮ್ಪ್ ಆಫ್ ಕೋರ್ಟ್ ಆಗುತ್ತದೆಂದು ಹೇಳುವುದರ ಬಗ್ಗೆ ಅಥವಾ ಕೋರ್ಟಿನ ವ್ಯಾಪ್ತಿಯಲ್ಲಿರತಕ್ಕ ವಿಷಯವನ್ನು ಇಲ್ಲಿ ಚರ್ಚೆ ಮಾಡಬಾರದೆಂದು ಎಂಬ ವಿಚಾರದಲ್ಲಿ ಆಗಲಿ ತಮ್ಮ ರಕ್ಷಣೆಯನ್ನು ನಾನು ಪಡೆಯುತ್ತಿದ್ದೇನೆ ಎಂದು...

(ಗೊಂದಲ)

SRI P.G.R. SCINDIA : Neither I am an accused nor my Governnment

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಯಾರೇ ಒಬ್ಬ ಅಧಿಕಾರಿ ತಜ್ಞರು ಈ ಛಾರ್ಜ ಶೀಟ್ ಸರಿಯಾಗಿದೆ ಎಂದು ಹೇಳಿಬಿಟ್ಟರೆ ನಾವು ನಮ್ಮ ಈ ಧರಣಿಯನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ, ಆದರೆ ಅವರಿಗೆ ಬೇಕಾಗಿರುವುದು ಅದಲ್ಲ. ಅವರು ಏನು ತಪ್ಪು ಮಾಡಿದ್ದಾರೆ ಅದನ್ನೇ ಇಲ್ಲಿ ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ನಾನು ತಮಗೆ ಬಹಳಷ್ಟೇ ಸಾರಿ ಹೇಳಿದ್ದೇನೆ. ಸ್ಕ್ಯಾಡ್ ಮಾಡುತ್ತೇವೆಂದು ಹೇಳಿದಿರಿ, ಮಾಡಲಿ ಎಂದು ಬಿಟ್ಟೆವು, ಸಿ.ಬಿ.ಡಿ. ಯಿಂದ ತನಿಖೆ ಮಾಡಿಸುತ್ತೀರಿ ಎಂದು ಹೇಳಿದಿರಿ ಅದಕ್ಕೂ ಒಪ್ಪಿದೆವು. ತಾವು ಪ್ರಾಮಾಣಿಕ ತನಿಖೆ ಮಾಡಿಸಿ. ಅಲ್ಲಿ ಇವತ್ತು ಪೆಪನ್ನ ಸೀಜ್ ಮಾಡಿಲ್ಲ. ಇಂಥಹ ಸಂದರ್ಭದಲ್ಲಿ ನಾವು ಸುಮ್ಮನೆ ಕೈಕಟ್ಟಿಕೊಂಡು ಕೂತುಕೊಳ್ಳುವುದಕ್ಕಾಗುತ್ತದೆಯೇ? ಉನ್ನತಮಟ್ಟದ ಅಧಿಕಾರಿಗಳಿಂದ ತನಿಖೆ ಮಾಡಿಸುತ್ತೇವೆಂದು ತಾವು ಹೇಳಿದಿರಿ. ಇವತ್ತು ನಾವು ಅಲ್ಲಿ ನಮ್ಮ ವಿಶ್ವಾಸವನ್ನು ಕಳೆದುಕೊಳ್ಳುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ನಮಗೆ ನ್ಯಾಯ ಸಿಕ್ಕಬೇಕು. ಅಲ್ಲಿ ಮುಗ್ಧ ಜನರು ಧರಣಿ, ಸತ್ಯಾಗ್ರಹ ಕೂತಿರುವುದರಿಂದ ಆ ಜನರ ಶಾಪ ನಿಮಗೆ ತಟ್ಟುತ್ತದೆ. ಇಷ್ಟೊಂದು ನಿರ್ಲಕ್ಷ್ಯತನವನ್ನು ಇದರಲ್ಲಿ ತೋರುವುದು ಖಂಡಿತ ಸಮಂಜಸವಲ್ಲ. ನಮ್ಮ ಉದ್ದೇಶ ಏನಿದೆ ಎಂಬುದನ್ನು ಹೇಳುತ್ತಿದ್ದೇವೆ. ಬಹುಶಃ ನಮಗೆ ಇದರಲ್ಲಿ ನ್ಯಾಯ ಸಿಕ್ಕದೇ ಇರಬಹುದು. ಯಾವ ಅಧಿಕಾರಿಗಳು ಏನು ಎಂಬುದು ಮುಖ್ಯವಲ್ಲ. ನಾವು ಯಾರನ್ನೂ ಹೆದರಿಸುವುದಕ್ಕೆ ಹೋಗಿಲ್ಲ ಎಂಬುದನ್ನು ಹೇಳಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ನಾನು ಮತ್ತೊಮ್ಮೆ ಗೌರವಾನ್ವಿತ ಸದಸ್ಯರಲ್ಲಿ ಹೇಳುತ್ತಿದ್ದೇನೆ, ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಸಿಓಡಿ ಎನಕ್ವೈರಿ ಆಗಬೇಕೆಂದಿರಿ, ಅದಕ್ಕೆ ಸಿಓಡಿಗೆ ಕೊಟ್ಟಿದ್ದೇವೆ. ಇದರಲ್ಲಿ ಪ್ರತಿಷ್ಠೆ ಪ್ರಶ್ನೆ ಇಲ್ಲ, ಪ್ರತಿಷ್ಠೆ ಮಾಡಿ ನಾವು ಗಳಿಸತಕ್ಕದ್ದು ಏನಿದೆ? ಅಧಿಕಾರದಲ್ಲಿ ಶಾಶ್ವತವಾಗಿ ಇರುತ್ತೇವೆಂದು ಏನೂ ಇಲ್ಲ. ಪ್ರಜಾತಂತ್ರ ಚೌಕಟ್ಟಿನಲ್ಲಿ ನಿಯಮಾನುಸಾರವಾಗಿ ನಾವು ಕೆಲಸ ಮಾಡಬೇಕಾಗುತ್ತದೆ. ಅವರು ಏನೋ ಕೆಲವು ವಿಚಾರಗಳನ್ನು ಹೇಳಿದ್ದಾರೆ, ಚಾರ್ಜ್‌ಶೀಟ್ ಬಗ್ಗೆ ಪೆಪನ್ಸ್ ಬಗ್ಗೆ ಮತ್ತೊಂದರ ಬಗ್ಗೆ ನಾನು ಈ ಸದನದಲ್ಲಿ ಮಾತನಾಡುವುದಕ್ಕಾಗುವುದಿಲ್ಲ. I am not the man to speak; I cannot speak. I have no authority to speak. ಈ ಹಂತದಲ್ಲಿ ನಾನು ಇಷ್ಟು ಹೇಳಿ ಮಾನ್ಯ ಸದಸ್ಯರಲ್ಲಿ

ಮನವಿ ಮಾಡಿಕೊಳ್ಳುತ್ತೇನೆ, ಖಂಡಿತವಾಗಿ ಫರ್ದರ್ ಇನವೆಸ್ಟಿಗೇಷನ್ ಮಾಡುವುದಕ್ಕೆ I will order the D.G. of C.O.D. himself to look into the matter.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರೇ ಹೇಳಿದ ಹಾಗೆ ಇಲ್ಲಿಯವರೆಗೆ ಪೋಲೀಸರ ಸ್ಟೇಟ್‌ಮೆಂಟಿಗಳು ಇವೆ. ಏನೆಂದರೆ ಮಂಗಳೂರಿನಲ್ಲಿ ಇಷ್ಟೊಂದು ಗಲಾಟೆಗಳು, ಖೂನಿಗಳು, ಲೂಟಿಗಳು, ದರೋಡೆಗಳು, ಏನು ನಡೆದಿವೆ ಇದಕ್ಕೆ ಬಾಂಬೆಯಿಂದ ಬರತಕ್ಕ ಗೂಂಡಾಗಳು, ಅಲ್ಲಿಂದ ಬರತಕ್ಕ ಅಂಡರ್ ಗ್ರೌಂಡ್‌ನಲ್ಲಿ ವರ್ಕ್ ಮಾಡತಕ್ಕ ಗೂಂಡಾಗಳು ಇವರೇ ಕಾರಣಕರ್ತರು ಎಂಬ ಹೇಳಿಕೆಗಳನ್ನು ಅನೇಕ ಸಾರಿ ಪೋಲೀಸರೇ ಕೊಟ್ಟಿದ್ದಾರೆ. ಪೋಲಿಸರೇ ಇದನ್ನು ಹೇಳುವಾಗ ಶಾಸಕರು ಕೂಡ ಸದನದಲ್ಲಿ ಓಪನ್ ಆಗಿ ಹೇಳುತ್ತಿದ್ದಾರೆ. ಕೇರಳ ಮತ್ತು ಬಾಂಬೆಯವರು ಮಾಡಿದ್ದಾರೆಂಬುದು ನಮಗೆ ಗೊತ್ತಿದೆ ಎಂಬ ಮಾತನ್ನು ಅವರು ಹೇಳುವಾಗ ಕನಿಷ್ಠಪಕ್ಷ ಸಿಐಬಿ. ಏನಕ್ವೈರಿ ಏನಿದೆ ಅದನ್ನು ಮಾಡುವುದಕ್ಕೆ ಪ್ರತಿಷ್ಠೆ ಪ್ರಶ್ನೆ ಏನೇ ಬಂತು? ನೀವು ಪ್ರತಿಷ್ಠೆ ಮಾಡಿಕೊಳ್ಳಬೇಡಿ, ನಾವು ಪ್ರತಿಷ್ಠೆ ಮಾಡಿಕೊಳ್ಳುವುದಿಲ್ಲ. ಪ್ರತಿಷ್ಠೆ ಮಾಡಿಕೊಳ್ಳಬೇಕಾದರೆ ಇದಕ್ಕೆ 11 ತಿಂಗಳು ಬೇಕಾಗಿರಲಿಲ್ಲ. ಈ ಮನೆಯಲ್ಲಿ ಪದೇ ಪದೇ 3 ಸಾರಿ ಹೇಳಿಸಿ ಮತ್ತೆ ನೀವು ಕರೆದಲ್ಲೆಲ್ಲಾ ಬಂದು ಮಾತನಾಡಿ ಬರತಕ್ಕ ಪ್ರಮೇಯವೇ ಇರಲಿಲ್ಲ. ನಾವು ಪೊಲಿಟಿಕಲ್ ಇಷ್ಯೂ ಮಾಡಬೇಕಾಗಿದ್ದರೆ ಅಥವಾ ಪ್ರತಿಷ್ಠೆ ಪ್ರಶ್ನೆ ಮಾಡಬೇಕಾಗಿದ್ದರೆ ಪದೇ ಪದೇ ತಮ್ಮನ್ನು ಕೈಜೋಡಿಸಿ ಕೇಳಿಕೊಳ್ಳುವುದರ ಅಥವಾ ಸಂಧಾನ ಮಾಡಿಕೊಳ್ಳುವುದು ಮಾತುಕತೆ ನಡೆಸತಕ್ಕ ಅವಶ್ಯಕತೆ ಇರಲಿಲ್ಲ. ಈಗ ತಾವು ಏತಕ್ಕೆ ಹಠ ಹಿಡಿದಿದ್ದೀರಿ ತಾವು ಕೇಂದ್ರ ಸರ್ಕಾರಕ್ಕೆ ಟೆಲಿಗ್ರಾಂ ಕಳುಹಿಸುವುದಕ್ಕೆ ಏನು ತೊಂದರೆ? ಅದನ್ನು ಸಿಐಬಿಗೆ ತೆಗೆದುಕೊಂಡರೆ ನಮ್ಮದೇನೂ ಆಕ್ಷೇಪಣೆ ಇಲ್ಲವೆಂದು ಹೇಳಿ ಇವತ್ತು ತಿರುಚಿ ಮುರುಚಿ ಮಾಡುವುದೇಕೆ? ಪೋಲೀಸರ ಮೇಲೆ ನಾವು ಏನು ಆಲಿಗೇಷನ್ ಮಾಡಿದ್ದೇವೆ? ಪೋಲೀಸರು ಕರಪ್ಟ ಇದ್ದಾರೆ, ಅವರು ಸರಿಯಾಗಿ ಇನವೆಸ್ಟಿಗೇಷನ್ ಮಾಡುವುದಿಲ್ಲ ಎಂದು ಹೇಳಿದ್ದೇವೆಯೆ? ಇದು ಅವರಿಂದ ಆಗದೇ ಇರತಕ್ಕ ಕೆಲಸ ಎಂದು ಹೇಳುತ್ತಿದ್ದೇವೆ. ಇದರಲ್ಲಿ ಇಂಟರ್-ಸ್ಟೇಟ್ ಲಿಂಕ್ ಇರುವುದರಿಂದ ಬಾಂಬೆ, ಕೇರಳ ಮತ್ತು ಕರ್ನಾಟಕ ಇವು 3 ಕಡೆ ಸುತ್ತಿಕೊಂಡಿರುವುದರಿಂದ ಸತ್ಯಾಂಶ ಹೊರಗಡೆ ಬರಬೇಕು. ಇದರ ಜೊತೆಯಲ್ಲಿ ಬರೀ ದರೋಡೆಗಳು ಖೂನಿಗಳು ಆಗಿವೆ. ಅದು ಹೊರಗಡೆ ಬರುತ್ತಿದೆ. ಅದಕ್ಕಾಗಿ ದಯವಿಟ್ಟು ತಾವು ಇದು ಹಿಂದೇ ಪ್ರಕರಣ ಅಲ್ಲ, ಬೇಕಾದರೆ ಅಲ್ಲಿ ಆದಂಥ ಎಲ್ಲಾ ಪ್ರಕರಣಗಳನ್ನು ಸಿಐಬಿಗೆ ಒಪ್ಪಿಸಿ. ನಾವು ಅದಕ್ಕೆ ತಯಾರಿದ್ದೇವೆ. ನಾವು ಅದು ಹಿಂದೇ ಏಂದು ಅಲ್ಲ, ನಿಮಗೆ ಯಾವುದು ಖುಷಿ ಬರುತ್ತದೆ 4-5-8 ಅವು ಇಲ್ಲಿಯವರೆಗೆ ಕಂಡುಹಿಡಿಯದೆ ಇರತಕ್ಕ, ಯಾರು ಅದರಲ್ಲಿ ಅಕ್ಯೂಸ್ಡ ಇದ್ದಾರೆ, ಮರ್ಡರರ್ಸ್ ಇದ್ದಾರೆ ಅವರು ಯಾರೂ ಸಿಕ್ಕಿಲ್ಲ, ಅಂಥದ್ದನ್ನೆಲ್ಲಾ ಬೇಕಾದರೆ ಪಟ್ಟಿಮಾಡಿ ಕಳುಹಿಸಿಕೊಡಿ. ಪ್ರತಿಷ್ಠೆ ಪ್ರಶ್ನೆ ಅಲ್ಲ. ಏಕೆಂದರೆ ಇಂಟರ್ ಸ್ಟೇಟ್ ಲಿಂಕ್ ಇರುವುದರಿಂದ ನಾವು ಸಿ.ಬಿ.ಐ. ಎನಕ್ವೈರಿ ಕೇಳುತ್ತಿದ್ದೇವೆ. ನಿಮ್ಮ ಪೋಲೀಸರ ಇನ್‌ವೆಸ್ಟಿಗೇಷನ್ಸಿ ಬಗ್ಗೆ ಮಾತನಾಡುತ್ತಿಲ್ಲ. ಅವರ ಎನವೆಸ್ಟಿಗೇಷನ್ಸ್, ಅವರ ವ್ಯಾಪ್ತಿ

ಜ್ಯೂರಿಸಿಡಿಕ್ಷನ್‌ನಲ್ಲಿ ಅವರಿಗೆ ಲಿಮಿಟೇಷನ್ ಇದೆ. ಅವರು ಲಿಮಿಟೇಷನ್‌ನಲ್ಲಿ ಅವರು ಕೆಲಸ ಮಾಡಬೇಕು. ಅವರು ಇವತ್ತು ಬೇರೆ ಜ್ಯೂರಿಸ್‌ದಿಕ್ಷನ್‌ನಲ್ಲಿ ಕೆಲಸ ಮಾಡಬೇಕೆಂದರೆ ಸ್ವಲ್ಪ ಕಷ್ಟವಾಗುತ್ತದೆ ಆದರೆ ಸಿ.ಬಿ.ಐ.ಗೆ ಅವರ ಒತ್ತಾಯಮಾಡುತ್ತಿದ್ದಾರೆ, ಇದನ್ನು ಮಾಡಬಹುದು, ಅದಕ್ಕಾಗಿ ದಯವಿಟ್ಟು ತಾವು ಒಪ್ಪಿಕೊಂಡು ಬಿಡಿ.

(ಈ ಹಂತದಲ್ಲಿ ಶ್ರೀ ಜಾಲಪ್ಪನವರು ಬೇರೆ ಸೀಟಿನಲ್ಲಿ ಕುಳಿತು ಮಾತನಾಡುತ್ತಿದ್ದರು)

ಶ್ರೀ ಎಂ. ಎಂ. ಖಿರ್ಗ: ನಿಮ್ಮ ಸೀಟಿಗೆ ಬಂದು ಮಾತಾಡಿ.

ಶ್ರೀ ಆರ್.ಎಲ್. ಜಾಲಪ್ಪ : ನಾನು ಸೀಟಿಗ ಹತ್ತಿರದಲ್ಲಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ : ಈಗ ಏನಾಗಿದೆ ಎಂದರೆ ಇವರು ರಿಟೈರ್‌ಮೆಂಟ್ ಏಜಿಗೆ ಬಂದಿದ್ದಾರೆ. ಅದಕ್ಕೆ ಎಲ್ಲಿಬೇಕು, ಯಾವುದು ಬೇಕು ಅದನ್ನು ಹೇಳುವುದು ಬಿಡುವುದು, ರೇಗಿಸುವುದು ಮತ್ತೇ ಹೊಗಿಬಿಡುವುದು.

ಶ್ರೀ ಆರ್. ಎಲ್. ಜಾಲಪ್ಪ : ಈ ಮನೆಗೆ ಯಾರು ಮೊದಲು ಬಂದರು ಅವರು ಮೊದಲು ರಿಟೈರ್ ಆಗಬೇಕು; ಆಮೇಲೆ ನಾವು ಆಗಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ : ದಯವಿಟ್ಟು ಇದನ್ನು ಒಪ್ಪಿಕೊಳ್ಳಿ.

ಶ್ರೀ ಆರ್.ಎಲ್. ಜಾಲಪ್ಪ : ನಮ್ಮಪೋಲೀಸ್ ಇಲಾಖೆಯಲ್ಲಿ ನಮಗೆ ನಂಜಿಕೆ ಇಲ್ಲದಿದ್ದರೆ ನಾವು ಸರ್ಕಾರ ಏನು ನಡೆಸುವುದು ಹೇಗೆ? ನಿಮ್ಮ ಕಾಲದಲ್ಲಿ ಬೇಕಾದಷ್ಟು ಆಗಿದೆ. ನೀರು ಎಲ್ಲವನ್ನೂ ಸಿ.ಬಿ.ಐ.ಗೆ ರೆಫರ್ ಮಾಡಲಿಲ್ಲ? This is not a reasonable demand.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮತ್ತೊಮ್ಮೆ ನಾನು ಮಾನ್ಯ ಸದಸ್ಯರಿಗೆ ಪ್ರಾಮಿಸ್ ಮಾಡುತ್ತಿದ್ದೇನೆ, ಸರ್ಕಾರ ಹೇಳಿದ್ದನ್ನು ಮತ್ತೊಮ್ಮೆ ಹೇಳುತ್ತೇನೆ; ಸೀನಿಯರ್ ಆಫೀಸರ್ ಮೂಲಕ, ಡಿಐಜಿ. ಮೂಲಕ ಎನಕ್ವೈರಿ ಮಾಡಿಸುತ್ತೇವೆಂದು ಹೇಳಿದ್ದೇನೆ. ನಾನು ಮಾಡಸದಿದ್ದರೆ ತಾವು ಪ್ರಿವಿಲೇಡ್ ಮೋಷನ್ ಮೂವ್ ಮಾಡಬಹುದು. ನಾನು ಖಂಡಿತ ಎನಕ್ವೈರಿ ಮಾಡಿಸುತ್ತೇನೆಂದು ಪ್ರಾಮಿಸ್ ಮಾಡುತ್ತೇನೆಂದು ಹೇಳಿದ ಮೇಲೆ ಮತ್ತೆ ನೀವು ಒತ್ತಾಯ ಮಾಡುತ್ತಿದ್ದೀರಲ್ಲಾ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಕುಂದಾಪುರದಲ್ಲಿ ಕಳೆದ ಒಂದು ವರ್ಷದಿಂದ 5-6 ಯುವಕರ ಕೊಲೆಯಾಗಿದೆ. ಇದರ ಬಗ್ಗೆ ಪ್ರತಾಪಚಂದ್ರಶೆಟ್ಟಿಯವರು ಹೇಳಿದ ಮೇಲೆ 7-8-9 ದಿನಗಳಿಂದ ಅಲ್ಲಿ ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಇದರ ಬಗ್ಗೆ ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೂ ಕೂಡ ಸಿಪಿಐ. ತನಿಖೆಗೆ ಒತ್ತಾಯಿಸಿ ಕೆಲವೇ ವ್ಯಕ್ತಿಗಳು ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಅದರ ಬಗ್ಗೆ ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲವೆಂದರೆ ಖಂಡಿತ ಸರ್ಕಾರ ನಾಚಿ ತಲೆತಗ್ಗಿಸಬೇಕಾಗಿದೆ. ಸರ್ಕಾರ ಈ ವಿಷಯಲ್ಲಿ ಕ್ರಮ ಕೈಗೊಳ್ಳುವುದು

ಅನಿವಾರ್ಯವಾಗಿದೆ. ತಕ್ಷಣ ಬೇಕಾದ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರದ ಜವಾಬ್ದಾರಿ ಇದೆ. ನಾನು ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ಐದಾರು ಜನರ ಕೊಲೆಯಾಗಿದೆ. ಅದರೂ ಕೂಡ ತನಿಖೆ ಆಗಿಲ್ಲ. ಆ ಐದಾರು ಕೊಲೆಗಳ ಬಗ್ಗೆ ಸಿಬಿಐ. ತನಿಖೆ ಆಗಬೇಕು. ಸಿಬಿಐ. ತನಿಖೆ ಆಗಿ ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು; ಮತ್ತು ನಿರಪರಾಧಿಗಳು ಯಾರಿದ್ದಾರೆ ಅವರಿಗೆ ತೊಂದರೆಯಾಗಬಾರದು. ಅವರನ್ನು ತಕ್ಷಣ ವಿಮುಕ್ತಗೊಳಿಸಬೇಕು. ಅಲ್ಲಿ ಏನು ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ ಅದನ್ನು ಆದಷ್ಟು ಬೇಗ ಮುಗಿಸುವ ರೀತಿಯಲ್ಲಿ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು ಎಲ್ಲಾ ಕೊಲೆಗಳ ಬಗ್ಗೆ ಸಿಬಿಐ. ತನಿಖೆ ಆಗಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎನ್. ಯೋಗೀಶ್ ಭಟ್ : ಈ ಸಂದರ್ಭದಲ್ಲಿ ಮಂಗಳೂರು ಶಾಸಕನಾಗಿ ನಾನು ಹೇಳುವಂಥದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಹೊರ ರಾಜ್ಯಗಳಿಂದ ಬಂದಿರತಕ್ಕ ಗುಂಪು, ಗಲಭೆ ಅಥವಾ ಗ್ರೂಪ್ ವಾರ್ ಎಂದು ಏನು ಹೇಳುತ್ತೇವೆ ಅದು ಆಗುವಂಥದ್ದು ಅನೇಕ ಸಂದರ್ಭಗಳಲ್ಲಿ ತಮ್ಮ ಗಮನಕ್ಕೆ ಅಥವಾ ಇಲಾಖೆಯ ಗಮನಕ್ಕೆ ಬಂದಿರಬಹುದು. ಕೋಟ್ಯಾಂತರ ರೂಪಾಯಿ ವಸ್ತುಗಳನ್ನು ಬಿರೀದಿ ಮಾಡುವಂಥ ಕುತಂತ್ರಗಳು ಯಾವುದೋ ಒಂದು ರೀತಿಯಲ್ಲಿ ನಡೆಯುತ್ತಿದೆ. ಈ ನಿಟ್ಟಿನಲ್ಲಿ ಸೂಕ್ಷ್ಮತ ಇರುವುದರಿಂದ ನಾನು ಒತ್ತಾಯ ಮಾಡುವುದು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿಗೆ ಸಂಬಂಧಪಟ್ಟ ಎಲ್ಲಾ ಕೊಲೆ ಪ್ರಕರಣಗಳನ್ನು ಸಿಬಿಐಗೆ ಒಳಪಡಿಸಿದರೆ ಹೆಚ್ಚಿನ ನ್ಯಾಯ ಸಿಗಬಹುದೆಂದು ನಾನು ಸರ್ಕಾರಕ್ಕೆ ಒತ್ತಾಯಿಸುತ್ತಿದ್ದೇನೆ.

ಉಪಾಧ್ಯಕ್ಷರು : ಈಗ ಸಭೆಯನ್ನು 15 ನಿಮಿಷ ಮುಂದಕ್ಕೆ ಹಾಕುತ್ತಿದ್ದೇನೆ. (ಸದನವು 11 ಗಂಟೆಗೆ ಮುಂದೂಡಲ್ಪಟ್ಟಿತು)

(ಸದನವು 11-20 ಗಂಟೆಗೆ ಸಭೆ ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷರಾದ ಶ್ರೀ ಎಂ.ಎಸ್. ಪಾಟೀಲ್ ಅವರು ಅಧ್ಯಕ್ಷ ಸ್ಥಾನದಲ್ಲಿ ಉಪಸ್ಥರಿದ್ದರು.)

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿ) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರ್ಗೆಯವರು ಹೇಳಿದ್ದನ್ನು ಕೇಳಿ, ಅವರ ವಾದದಲ್ಲಿ ಸಾಕಷ್ಟು ಸತ್ಯಾಂಶ ಇದ್ದರೂ, ಈ ಸಮಯದಲ್ಲಿ ನಾವು ಇದನ್ನು ಸಿ.ಬಿ.ಐ.ಗೆ ಒಪ್ಪಿಸುವುದು ಎಷ್ಟು ಕಷ್ಟವಿದೆ ಎನ್ನುವುದನ್ನು ಅವರು ತಿಳಿದುಕೊಂಡಿದ್ದಾರೆ, ನಮಗೂ ಅರ್ಥವಾಗಿದೆ. ಸರ್ಕಾರ ನಡೆಸುವಾಗ ಅವರೇನೂ ನಮ್ಮ ಪೋಲೀಸಿನವರ ಮೇಲೆ, ಮಾನ್ಯ ಪ್ರತಾಪಚಂದ್ರಶೆಟ್ಟಿಯವರಾಗಲೀ ಅನುಮಾನ ಪಟ್ಟಿಲ್ಲ. ಇಷ್ಟೆಲ್ಲಾ ಪ್ರಯತ್ನ ಮಾಡಿದರೂ ಇನ್ನೂ ತಪ್ಪಿತಸ್ಥರನ್ನು ಹಿಡಿಯುವುದಕ್ಕೆ ಆಗಿಲ್ಲ. ಕಾನೂನಿಗೆ ವಿರುದ್ಧವಾಗಿ ಹೋಗತಕ್ಕಂಥ ದುಷ್ಟಶಕ್ತಿಗಳನ್ನು ದಂಡಿಸುವುದಕ್ಕೆ ಆಗಿಲ್ಲವೆಂದು ಅವರಿಗೆ ಸಿಟ್ಟು. ಇದು ಸ್ವಾಭಾವಿಕ. ಅದನ್ನು ಈಗಾಗಲೇ ಮಾನ್ಯ ಗೃಹಮಂತ್ರಿಗಳು ಹೇಳಿದ್ದಾರೆ. ನಾನು ಇವತ್ತು ತಮ್ಮ ಮುಖಾಂತರ ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಅತಿಶೀಘ್ರವಾಗಿ, ಏಕೆಂದರೆ ನೀವು

ನಿಮ್ಮ ಕ್ಷೇತ್ರದಲ್ಲಿ ಅಗತಕ್ಕಂಥ ಅನಾಹುತಗಳಿಗೆ ಜನರಿಗೆ ಉತ್ತರ ಕೊಡುವುದಕ್ಕೆ ಕಷ್ಟವಾಗುತ್ತದೆ. ಪ್ರತಿಯೊಬ್ಬ ಶಾಸಕರಿಗೂ ಅವರವರ ಜವಾಬ್ದಾರಿ ಇರುತ್ತದೆ, ಇದನ್ನು ನಾನು ಒಪ್ಪುತ್ತೇನೆ. ಅತಿರೇಕವಾಗಿ ನಮ್ಮ ಕಾನೂನಿಗೆ ವಿರುದ್ಧವಾಗಿ ಹೋಗಿರತಕ್ಕಂಥವರು ಯಾರೇ ಇರಲಿ, ಎಷ್ಟೇ ದೊಡ್ಡವರು ಇರಲಿ, ಯಾವುದೇ ದೇಶದವರು ಇರಲಿ, ಅವರನ್ನು ಹಿಡಿದು ತಿಮ್ಮಪ್ಪನವರು ನೀವು ಸರ್ಕಾರವನ್ನು ನಡೆಸಿದ್ದೀರಿ. ಆದ್ದರಿಂದ ನಮ್ಮ ಕಷ್ಟವನ್ನು ಸ್ವಲ್ಪ ತಿಳಿದುಕೊಳ್ಳಿ. We will do justice. We are committed to do justice. ಅದಕ್ಕೋಸ್ಕರ ನಮ್ಮ ಗೃಹಮಂತ್ರಿಗಳು ಇಷ್ಟು ಹೇಳಿದ್ದಾರೆ. ದಯವಿಟ್ಟು ಈ ಮಾತಿನ ಮೇಲೆ ನಾನು ಆಶ್ವಾಸನೆ ಕೊಡುತ್ತೇನೆ. ಸರ್ಕಾರ ಇದರೊಳಗೆ ಯಾವುದೇ ಕಾರಣದಿಂದ, ಎಷ್ಟೇ ಬ್ಯಾಕ್‌ಗ್ರೌಂಡ್ ಯಾರದ್ದೇ ಇರಲಿ, ಅಥವಾ ಬೇರೆ ರಾಜ್ಯ ಸರ್ಕಾರವಾ ಇರಲಿ, ನಾವು ಇದರೊಳಗೆ ಹಿಂಜರಿಯುವುದಿಲ್ಲ. ಅವರನ್ನು ಶಿಕ್ಷೆ ಮಾಡುತ್ತೇವೆ. ದಯವಿಟ್ಟು ಸಹಕರಿಸಿ ತಮ್ಮ ಸ್ಥಾನಗಳಿಗೆ ವಾಪಸ್ಸು ಹೋಗಿ.

(ಧರಣಿ ಕುಳಿತಿದ್ದ ಕಾಂಗ್ರೆಸ್ ಪಕ್ಷದ ಶಾಸಕರು ತಮ್ಮ ಸ್ಥಾನಗಳಿಗೆ ಮರಳಿದರು.)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಈಗ ಮಾನ್ಯ ಉಪಮುಖ್ಯಮಂತ್ರಿಗಳು ಮತ್ತು ಗೃಹಸಚಿವರು ಇವರಿಬ್ಬರೂ ಕೂಡ ಸದನಕ್ಕೆ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅಲ್ಲಿ ಆಗಿರತಕ್ಕಂಥ ಕೊಲೆ, ದರೋಡೆ ಇವರ ಬಗ್ಗೆ ನಾವು ಯಾವುದೇ ರೀತಿಯಿಂದ ಅದನ್ನು ಸಹಿಸುವುದಿಲ್ಲ, ಅದಕ್ಕೆ ನಿಷ್ಪಕ್ಷಪಾತವಾದಂಥ ತನಿಖೆಯನ್ನು ನಡೆಸುತ್ತೇವೆ. ಮಿದ್ದಾಗಿ ಡಿ.ಜೆ.ಪಿ. ಯವರಿಗೆ ನಾವು ವಿನ್ಕ್ವೈರಿ ಕೆಲಸವನ್ನು ಒಪ್ಪಿಸುತ್ತೇವೆ, ಆದ್ದರಿಂದ ನೀವು ಧರಣಿಯನ್ನು ವಾಪಸ್ಸು ತಗೆದುಕೊಳ್ಳಿ ಎಂದು ಅವರು ಕೇಳಿಕೊಂಡಿದ್ದಾರೆ. ಅದನ್ನು ನಂಬಿ ಅವರ ಮೇಲೆ ಸಂಪೂರ್ಣವಾಗಿ ವಿಶ್ವಾಸ ಇಟ್ಟು ಇವತ್ತು ನಮ್ಮ ಧರಣಿಯನ್ನು ನಾವು ಹಿಂದಕ್ಕೆ ತಗದುಕೊಂಡಿದ್ದೇವೆ. ಅದಕ್ಕಾಗಿ ತಮ್ಮ ಮುಖಾಂತರ ಅವರನ್ನು ನಾನು ಇನ್ನೊಮ್ಮೆ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಯಾವ ನಂಬಿಕೆ ಇಟ್ಟು ಇವತ್ತು ನಮ್ಮ ಶಾಸಕರು, ನಾವು ವಿಪ್ಲರೂ ಕೂಡ ಈ ಒಂದು ಧರಣಿಯನ್ನು ವಾಪಸ್ಸು ತಗೆದುಕೊಂಡಿದ್ದೇವೆ, ಈ ನಂಬಿಕೆಯನ್ನು ತಾವು ಉಳಿಸಿಕೊಂಡು ಹೋಗುತ್ತೀರಿ ಎನ್ನತಕ್ಕಂಥ ವಿಶ್ವಾಸವನ್ನು ಪುನಃ ವ್ಯಕ್ತಮಾಡುತ್ತಾ ಅಲ್ಲಿಸುಮಾರು 11 ತಿಂಗಳಿಂದ ಏನು ಸತ್ಯಾಗ್ರಹ ಕುಳಿತಿದ್ದಾರೆ, ಕನಿಷ್ಪಪಕ್ಷ ಈ ಮೆಸೇಜ್ ತಮ್ಮ ಮುಖಾಂತರ ಹೋದರೆ ಅವರಿಗೂ ಸಮಾಧಾನವಾಗುತ್ತದೆ. ಇಲ್ಲಿ, ಸರ್ಕಾರದವರು ಇದರ ಬಗ್ಗೆ ಅಸಕ್ತಿವಹಿಸಿದ್ದಾರೆ, ಮಿದ್ದಾಗಿ ಉಪಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳು ಹೇಳಿದ್ದಾರೆ, ಡಿ.ಜೆ.ಪಿ. ಅವರ ಮುಖಾಂತರವೇ ತನಿಖೆ ಮಾಡಿಸಿ ಇದಕ್ಕೆ ಪರಿಹಾರ ಕೊಡಿಸುತ್ತೇವೆ ಎಂದು ಹೇಳಿದ್ದಾರೆ. ಅದಕ್ಕಾಗಿ ಈ ಒಂದು ಮೆಸೇಜ್ ತಮ್ಮ ಮುಖಾಂತರ ಹೋದರೆ ಅನುಕೂಲವಾಗುವುದು. ಅದಕ್ಕಾಗಿ ದಯವಿಟ್ಟು ಇದರ ಬಗ್ಗೆ ತಾವು ಒಂದು ಹೇಳಿಕೆಯನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೇ, ಅಲ್ಲಿ ಮಂಗಳೂರಿನಲ್ಲಿ ಮತ್ತು

ಜಿಲ್ಲೆಯಲ್ಲಿ ಏನು ಧರಣಿಯನ್ನು ನಡೆಸುತ್ತಿದ್ದಾರೆ, ಬಹುಮಾನ ಕಾರ್ಯಾಗ್ರಹ ನಡೆಸಿದ್ದಾರೆ, ಅದಂಗೂ ಸಹ ಈ ಸರ್ಕಾರ ಮನಸು ಮಾಡಿಕೊಳ್ಳುತ್ತದೆ. ದಯವಿಟ್ಟು ಸಹಕರಿಸಿ. ದಯವಿಟ್ಟು ಸಹಕಾರ ನೀಡಿ. ಆ ಕೊಲೆಗಡುಕರು ಯಾರೇ ಇರಲಿ, ಅವರನ್ನು ಬಿಡಬೇಕು ಅಂದರೆ ಇಲ್ಲಿ ನೀವು ಧರಣಿ ಮಾಡುತ್ತಿದ್ದರೆ, ಸರಿಯಾಗುವುದಿಲ್ಲ. ಯಾವುದೇ ಅಧಿಕಾರಿಗಳು ಬೇಕು ಅಂತಹವರನ್ನು ತಂದು ಇತ್ತೀಚೆಗೆ ಗೃಹಮಂತ್ರಿಗಳು ಅಲ್ಲಿಗೆ ಕಳುಹಿಸುತ್ತಿದ್ದಾರೆ. ದಯವಿಟ್ಟು ಸಹಕರಿಸಿ ಅಲ್ಲಿ ಯಾವುದೇ ರೀತಿಯ ಕಾರ್ಯಾಗ್ರಹವನ್ನು ನೀವು ಮಾಡುವುದನ್ನು ನಿಲ್ಲಿಸಬೇಕೆಂದು ನಾನು ಮನಸು ಮಾಡಿಕೊಳ್ಳುತ್ತೇನೆ.

ವಿತ್ತೀಯ ಕಾರ್ಯಕಲಾಪ

(1996-97ನೇ ಸಾಲಿನ ಆಯವ್ಯಯದ ಮೇಲೆ ಮುಂದುವರಿದ ಚರ್ಚೆ)

+ಶ್ರೀ ಬಿ.ಎ. ಮೊಯಿದೀನ್ ಭಾವ (ಮಂಗಳೂರು) : ಸನ್ಮಾನ್ಯ ಉಪಾಧ್ಯಕ್ಷರೇ, 1996-97ರ ಆಯವ್ಯಯದ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಕೆಲವು ಅನಿಸಿಕೆಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಕ್ರಮಸಂಖ್ಯೆ 58ರ ಪ್ರಕಾರ ಮಾನ್ಯ ಹಾಗೂ ಕೃಷಿಕರ ಸೇವೆ ಬಗ್ಗೆ. ಸನ್ಮಾನ್ಯ ಮುಖ್ಯಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಗೆ ಬಂದಿದ್ದರು. ಬಂದು ಕೃಷಿಕರಿಗಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಒಂದು ಮಾತನ್ನು ಹೇಳಿದ್ದರು. ದಕ್ಷಿಣ ಕನ್ನಡ ಜಿಲ್ಲೆಗೆ ಭಾಗಶಃ ಬರುತ್ತಿದ್ದಾಳೆ, ಅವಳನ್ನು ಸ್ವಾಗತಿಸಿ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಆ ಸಂದರ್ಭದಲ್ಲಿ ನನಗೆ ಆಸ್ಪತ್ರೆಯನ್ನು ಅಲ್ಲಿ ತೆರೆಯಲು ಇಚ್ಛಿಸಿದ್ದರಿಂದ ತೆರೆಯನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಬಹುಶಃ ಈ ಭಾಗಗಳಿಗೆ ದಕ್ಷಿಣ ಕನ್ನಡ ಜಿಲ್ಲೆಗೆ ಬಂದಿದ್ದರೆ ಅಥವಾ ಕರ್ನಾಟಕ ರಾಜ್ಯದ ಜನತೆಗಾದರೂ ಬಂದಿದ್ದರೆ ತುಂಬಾ ಸಂತೋಷ ಇತ್ತು. ಆದರೆ ಇವತ್ತು ಕೇವಲ ಕೆಲವು ಕೃಷಿಕರಿಗೋಸ್ಕರ ಮತ್ತು ಅದರಲ್ಲಿ ಬೆಂಬಲಿಸುವಂಥ ಕೆಲವರಿಗೆ ಮಾತ್ರ ಭಾಗಗಳಿಗೆ ಸೀಮಿತವಾದಿದ್ದರೆ ಅದಕ್ಕೆ ಸಮಜಾಯಿಷಿ ಇದೆ, ಆಕ್ಷೇಪಣೆ ಇದೆ. ಈ ಬಗ್ಗೆ ನಿನ್ನೆ ಮಾತನಾಡುತ್ತಾ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. ಕೃಷಿಕರಿಗಾ ನೀತಿಯನ್ನು ಇನ್ನೂ ನಾವು ಮಾಡಿಲ್ಲ, ಇದರ ಬಗ್ಗೆ ಯೋಚನೆಯಲ್ಲಿದ್ದೇವೆ ಎಂದು. ಈ ಸಂದರ್ಭದಲ್ಲಿ ನನ್ನ ಕೆಲವು ಅನಿಸಿಕೆಗಳನ್ನು ತಿಳಿಸಲು ಇಚ್ಛಿಸುತ್ತೇನೆ. ಇತ್ತೀಚೆಗೆ ದಿಸೆಂಬರ್‌ನಲ್ಲಿ, ಮಂಗಳೂರಿನಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನೋ ಕರ್ನಾಟಕದಲ್ಲಿ ಅಷ್ಟೇ ಅಲ್ಲ, ಇಡೀ ದೇಶದಲ್ಲಿ ಮಾಮೂಲಾಗುವಂಥ ರೀತಿಯಲ್ಲಿ ಒಂದು ಹೋರಾಟ ಮೀನುಗಾರಿಕೆ ಬಂದರಿನಲ್ಲಿ ನಡೆಯಿತು. ಅದರ ಅಲ್ಲಿ ತಮ್ಮ ಆಳಿವು, ಬಾಳಿವುಗೋಸ್ಕರ ಈ ಹೋರಾಟವನ್ನು ಮಾಡಿದ್ದರು. ಸುಮಾರು ಮೂರು ಲಕ್ಷಕ್ಕೂ ಮೀನುಗಾರರು ಸಾಕಷ್ಟು ನಿರ್ಣಾತಕರಾಗುತ್ತಿದ್ದಾರೆ, ಸಿರುಮ್ಯೋಗಿಗಳಾಗುತ್ತಾರೆ. ಈ ವಿಷಯದಲ್ಲಿ ಅವರು ಹೋರಾಟವನ್ನು ಮಾಡಿದ್ದರು. ಈ ಸಂದರ್ಭದಲ್ಲಿ ಮುಂದೆ ಬಸವರಾಜ ಬೊಮ್ಮಾಯಿ ತಮ್ಮಂಗಳೂರಿಗೆ ಬಂದಿದ್ದರು. ಇಂತಹ ಸಂದರ್ಭದಲ್ಲಿ ಕೂಡ ಕೆಲವು ಜಿಲ್ಲಾಧಿಕಾರಿಗಳಿಗೆ ಅಲ್ಲಿ ಸರ್ಕಾರದ ಕಡೆಯಿಂದ ಮೀನುಗಾರ ಬಂಧುಗಳಿಗೂ, ಜನಪ್ರತಿನಿಧಿಗಳಿಂದಲೂ ಆಗಾಗ ಇತ್ತು. ಇಲ್ಲಿ ನಿರಕ್ಷರಕುಕ್ಷಿಗಳು ಯಾರಿದ್ದಾರೆ, ಅವರಿಗೆ ಉದ್ಯೋಗಾವಕಾಶವನ್ನು ಯಾವುದೇ